# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

| ಸಂಪುಟ-೧೫೫<br>**Volume-155** | ಬೆಂಗಳೂರು, ಗುರುವಾರ , ೩೦, ಜನವರಿ ,೨೦೨೦ ( **ಮಾಘ** ೧೦, ಶಕವರ್ಷ ೧೯೪೧)<br>**Bengaluru, THURSDAY ,30,JANUARY, 2020 ( Magha 10, ShakaVarsha 1941)** | ಸಂಚಿಕೆ-೦೫<br>**Issue -05** |
|---|---|---|


## ಭಾಗ ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ತುಮಕೂರು ಜಿಲ್ಲೆ, ಶಿರಾ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ(ಪ್ರ–1) ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ–ಆದೇಶ.

**ಓದಲಾಗಿದೆ:**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 145 ಎಂಐಬಿ 1998, ದಿನಾಂಕ: 27.05.1998.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 140 ಬೆಂರೂಪ್ರಾ 2004, ದಿನಾಂಕ: 26.05.2005.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 262 ಬೆಂರೂಪ್ರಾ 2014, ದಿನಾಂಕ: 24.11.2014.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 344 ಬೆಂರೂಪ್ರಾ 2014, ದಿನಾಂಕ: 20.01.2015.
5. ಸದಸ್ಯ ಕಾರ್ಯದರ್ಶಿ, ಶಿರಾ ಯೋಜನಾ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಶಿಯೋಪ್ರಾ/ಮ.ಯೋ.ತ/01/2018–19/25, ದಿನಾಂಕ: 17.04.2018.
6. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಇವರ ಪ್ರಸ್ತಾವನೆಗಳ ಸಂಖ್ಯೆ ಆಖಿಅಕ–6–ಒಕಕ–2016–17, ದಿನಾಂಕ: 01.10.2018 ಮತ್ತು 18.09.2019.

*******

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ: (1)ರ ಸರ್ಕಾರದ ಅಧಿಸೂಚನೆಯಲ್ಲಿ, ಶಿರಾ ಪಟ್ಟಣದ ಪುರಸಭೆ ವ್ಯಾಪ್ತಿಯನ್ನೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿ ಪುರಸಭೆಯೇ ಯೋಜನಾ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುವಂತೆ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಅಧಿಸೂಚನೆಯಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 1961ರ ಪ್ರಕರಣ 13(3)ರನ್ವಯ ಶಿರಾ ಪಟ್ಟಣದ ಸ್ಥೂಲಭಿವೃದ್ಧಿ ಯೋಜನೆಗೆ ಸರ್ಕಾರವು ಅಂತಿಮ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ಅಧಿಸೂಚನೆಯಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 4(ಎ)ರಡಿಯಲ್ಲಿ ಉಲ್ಲೇಖ(1)ರ ಅಧಿಸೂಚನೆಯನ್ನು ಮಾರ್ಪಡಿಸಿ, ವಿಸ್ತರಿಸಿದ ಸ್ಥಳಿಯ ಯೋಜನಾಪ್ರ ದೇಶವೆಂದು ಘೋಷಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಅಧಿಸೂಚನೆಯಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 1961ರ ಪ್ರಕಾರ ತುಮಕೂರು ಜಿಲ್ಲೆ, ಶಿರಾ ಪಟ್ಟಣಕ್ಕೆ ಪ್ರತ್ಯೇಕ ಯೋಜನಾ ಪ್ರಾಧಿಕಾರವನ್ನು ರಚಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ, ಸದಸ್ಯ ಕಾರ್ಯದರ್ಶಿ ಶಿರಾ ಯೋಜನಾ ಪ್ರಾಧಿಕಾರ, ಇವರು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೊಜನಾ ಕಾಯ್ದೆ, 1961ರ ಪ್ರಕರಣ 13(1)ರನ್ವಯ ಶಿರಾ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ (ಪ–1)ನ್ನು ಸಿದ್ದಪಡಿಸಿ, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರಲ್ಲಿ ನಗರ ಮತ್ತು ಗ್ರಾಮಾಂತರ ಯೊಜನಾ ನಿರ್ದೇಶಕರು, ಇವರ ಪ್ರಸ್ತಾವನೆಗಳಲ್ಲಿ, ಶಿರಾ ಸ್ಥಳೀಯಯೋಜನಾ ಪ್ರದೇಶ ವ್ಯಾಪ್ತಿಯ ಜನಸಂಖ್ಯೆಯು 2031ರಲ್ಲಿ 2,30,000 ಗಳಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾಯೋಜನೆಯನ್ನು ತಯಾರಿಸಲಾಗಿದೆ. ಶಿರಾ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಒಟ್ಟು 5071.04 ಹೆಕ್ಟೇರ್ ಪ್ರದೇಶವನ್ನು ನಗರದ ಅಭಿವೃದ್ದಿಗಾಗಿ ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ, ಮಹಾಯೋಜನೆಯನ್ನು ರೂಪಿಸಲಾಗಿದೆ. ನಗರದ ಮುಂದಿನ ಯೋಜಿತ ಬೆಳವಣಿಗೆಗೆ ಪ್ರಸ್ತಾಪಿಸಿರುವ 5071.04 ಹೆಕ್ಟರ್ ಪ್ರದೇಶದಲ್ಲಿ ವಸತಿಗಾಗಿ 2735.31 ಹೆಕ್ಟೇರ್ (ಶೇ.53.94), ವಾಣಿಜ್ಯಕ್ಕಾಗಿ 236.63 ಹೆಕ್ಟರ್ (ಶೇ.4.67), ಕೈಗಾರಿಕೆಗಾಗಿ 587.58 ಹೆಕ್ಟರ್, (ಶೇ.11.59), ಸಾರ್ವಜನಿಕ / ಅರೆ ಸರ್ವಜನಿಕ ಉಪಯೋಗಕ್ಕೆ 268.77 ಹೆಕ್ಟೇರ್ (ಶೇ.5.30), ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ 517.25 ಹೆಕ್ಟರ್ (ಶೇ.10.20), ಸಾರ್ವಜನಿಕ ಉಪಯುಕ್ತತೆಗಾಗಿ 20.93 ಹೆಕ್ಟೇರ್ (ಶೇ.0.41) ಹಾಗೂ ಸಾರಿಗೆ / ಸಂಪರ್ಕ ವಲಯಕ್ಕೆ 680.60 ಹೆಕ್ಟೇರ್ (ಶೇ.13.42), ಪುರಾತತ್ವ ಸ್ಮಾರಕಗಳಿಗೆ 23.97 ಹೆಕ್ಟೇರ್ (ಶೇ. 0.47) ಪ್ರದೇಶವನ್ನು ಮೀಸಲಿಟ್ಟು ಭೂ ಉಪಯೋಗವನ್ನು ನಿಗಧಿಪಡಿಸಲಾಗಿದೆ. ಮಹಾಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಸದರಿ ಮಹಾಯೋಜನೆ (ಪ–1)ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಪ್ರಕರಣ 13(1)ರನ್ವಯ ತಾತ್ಕಾಲಿಕ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 199 ಬೆಂರೂಪ್ರಾ 2018, ಬೆಂಗಳೂರು, ದಿನಾಂಕ:24.12.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ತುಮಕೂರು ಜಿಲ್ಲೆ, ಶಿರಾ ಸ್ಥಳೀಯ ಯೋಜನಾ ಪ್ರದೇಶಕ್ಕಾಗಿ ಜಲಾವೃತ ಪ್ರದೇಶ 3403.46 ಹೆಕ್ಟೇರ್, ವ್ಯವಸಾಯ ವಲಯ 22848.93 ಹೆಕ್ಟರ್ ಹಾಗೂ ಉದ್ದೇಶಿತ ಭೂ ಬಳಕೆ 5071.04

ಹೆಕ್ಟೇರ್ ಸೇರಿದಂತೆ ಒಟ್ಟು 31323.43 ಹೆಕ್ಟೇರ್ ಪ್ರದೇಶದಲ್ಲಿ ರೂಪಿಸಿರುವ ಮಹಾಯೋಜನೆ (ಪ-1) ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಪ್ರಕರಣ 13(1) ರನ್ವಯ ಸರ್ಕಾರದ ತಾತ್ಕಾಲಿಕ ಅನುಮೋದನೆ ನೀಡಲಾಗಿದೆ. ಮಹಾಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಸಿ. ಎಸ್. ಶಿವಕುಮಾರಸ್ವಾಮಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

PR-15

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಅಂತಿಮ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ನಅಇ 203 ಬೆಂರೂಪ್ರಾ 2017, ದಿನಾಂಕ 02.03.2018.
2. ಸದಸ್ಯ ಕಾರ್ಯದರ್ಶಿ, ಗೌರಿಬಿದನೂರು ಯೋಜನಾ ಪ್ರಾಧಿಕಾರ ಇವರ ಪತ್ರಗಳ ಸಂಖ್ಯೆ:
   a) ಗೌ.ಯೋ.ಪ್ರಾ/ಮ.ಯೋ.ತ(ಅಂತಿಮ)/2016-17/08, ದಿನಾಂಕ 04.04.2019.
   b) ಗೌ.ಯೋ.ಪ್ರಾ/ಮ.ಯೋ.ತ(ಅಂತಿಮ)/2016-17/102, ದಿನಾಂಕ 09.07.2019.
   c) ಗೌ.ಯೋ.ಪ್ರಾ/ಮಾ.ಯೋ.ತ(ಅಂತಿಮ)/2016-17/174, ದಿನಾಂಕ: 19.10.2019.
3. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಇವರ ಪ್ರಸ್ತಾವನೆಗಳ ಸಂಖ್ಯೆ DTCP-02-MPP-2017-18, ದಿನಾಂಕ 23.07.2019 ಮತ್ತು 23.10.2019.

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಸರ್ಕಾರದ ಆದೇಶದಲ್ಲಿ ಗೌರಿಬಿದನೂರು ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2004ರ ಪ್ರಕರಣ 13(1)ರನ್ವಯ ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಸದಸ್ಯ ಕಾರ್ಯದರ್ಶಿ, ಗೌರಿಬಿದನೂರು ಯೋಜನಾ ಪ್ರಾಧಿಕಾರ, ಇವರು ಗೌರಿಬಿದನೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೊಜನಾ ಕಾಯ್ದೆ

ಕಲಂ 1961ರ ಪ್ರಕರಣ 13(1) ಮತ್ತು (2) ರನ್ವಯ ಅಗತ್ಯ ಕ್ರಮ ಜರುಗಿಸಿ ಮಹಾಯೋಜನೆಯ ನಕ್ಷೆಗಳನ್ನು ಹಾಗೂ ವರದಿಯನ್ನು ತಯಾರಿಸಿ ಸರ್ಕಾರದ ಅಂತಿಮ ಅನುಮೋದನೆಗಾಗಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರ ಮುಂಖಾತರ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಇವರ ಪ್ರಸ್ತಾವನೆಗಳಲ್ಲಿ, ಗೌರಿಬಿದನೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯ ಜನಸಂಖ್ಯೆಯು 2031 ರಲ್ಲಿ 1,65,000 ಗಳಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾಯೋಜನೆಯನ್ನು ತಯಾರಿಸಲಾಗಿದೆ. ಗೌರಿಬಿದನೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಒಟ್ಟು 2650.85 ಹೆಕ್ಟೇರ್ ಪ್ರದೇಶವನ್ನು ನಗರದ ಅಭಿವೃದ್ಧಿಗಾಗಿ ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ, ಮಹಾಯೋಜನೆಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ (12)ರಲ್ಲಿ ನಿಗದಿ ಪಡಿಸಿರುವ ಅಂಶಗಳನ್ನು ಪರಿಗಣಿಸಿ ನಗರದ ಮುಂದಿನ ಯೋಜಿತ ಬೆಳವಣಿಗೆಗೆ ಪ್ರಸ್ತಾಪಿಸಿರುವ 2650.85 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 1471.81 ಹೆಕ್ಟೇರ್ (ಶೇ.55.52), ವಾಣಿಜ್ಯಕ್ಕಾಗಿ 156.13 ಹೆಕ್ಟೇರ್ (ಶೇ.5.89), ಕೈಗಾರಿಕೆಗಾಗಿ 144.19 ಹೆಕ್ಟೇರ್, (ಶೇ.5.44), ಸಾರ್ವಜನಿಕ / ಅರೆಸಾರ್ವಜನಿಕ ಉಪಯೋಗಕ್ಕೆ 134.15 ಹೆಕ್ಟೇರ್, (ಶೇ.5.06), ಉದ್ಯಾನವನ ಮತ್ತು ಬಯಲುಜಾಗಕ್ಕಾಗಿ 266.15 ಹೆಕ್ಟೇರ್ (ಶೇ.10.04), ಸರ್ವಜನಿಕ ಉಪಯುಕ್ತತೆಗಾಗಿ 14.10 ಹೆಕ್ಟೇರ್, (ಶೇ.0.53) ಹಾಗೂ ಸಾರಿಗೆ / ಸಂಪರ್ಕವಲಯಕ್ಕೆ 464.32 ಹೆಕ್ಟೇರ್ (ಶೇ.17.52), ಪ್ರದೇಶವನ್ನು ನಿಗಧಿಪಡಿಸಲಾಗಿದೆ. ಮಹಾಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಸದರಿ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೊಜನಾ ಕಾಯ್ದೆ, 1961ರ ಪ್ರಕರಣ 13(3)ರನ್ವಯ ಅಂತಿಮ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 77 ಬೆಂರೂಪ್ರಾ 2019(ಇ–ಆಫೀಸ್),**

**ಬೆಂಗಳೂರು, ದಿನಾಂಕ:27.12.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗೌರಿಬಿದನೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕಾಗಿ ಜಲಾವೃತ ಪ್ರದೇಶ 194.16 ಹೆಕ್ಟೇರ್, ವ್ಯವಸಾಯ ವಲಯ 1004.99 ಹೆಕ್ಟರ್ ಹಾಗೂ ಉದ್ದೇಶಿತವಿವಿಧಭೂಬಳಕೆ 2650.85 ಹೆಕ್ಟೇರ್ ಸೇರಿದಂತೆಒಟ್ಟು 3850.00 ಹೆಕ್ಟೇರ್ ಪ್ರದೇಶದಲ್ಲಿ ರೂಪಿಸಿರುವ ಮಹಾಯೋಜನೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಪ್ರಕರಣ 13(3)ರನ್ವಯ ಸರ್ಕಾರದ ಅಂತಿಮ ಅನುಮೋದನೆ ನೀಡಲಾಗಿದೆ. ಮಹಾಯೋಜನೆಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

- ಈ ಆದೇಶದ ದಿನಾಂಕ ದಿಂದ ಎರಡು ವರ್ಷಗಳವರೆಗೆ ಪ್ರಾಧಿಕಾರವು ಯಾವುದೇ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಸಿ. ಎಸ್. ಶಿವಕುಮಾರಸ್ವಾಮಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

PR-16

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೋಲಾರ ಜಿಲ್ಲೆ, ಮಾಲೂರು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ ಆದೇಶ.

**ಓದಲಾಗಿದೆ:**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 136 ಬೆಂರೂಪ್ರಾ 2008, ದಿನಾಂಕ: 03.02.2009.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 120 ಬೆಂರೂಪ್ರಾ 2009, ದಿನಾಂಕ: 16.06.2009.
3. ಸದಸ್ಯ ಕಾರ್ಯದರ್ಶಿ, ಮಾಲೂರು ಯೋಜನಾ ಪ್ರಾಧಿಕಾರ ಇವರ ಪತ್ರಗಳ ಸಂಖ್ಯೆ: ಮಾ.ಯೋ.ಪ್ರಾ/ಮ.ಯೋ01/2018-19/496, ದಿನಾಂಕ: 29.10.2018, 16.01.2019 ಮತ್ತು 10.07.2019.
4. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಇವರ ಪ್ರಸ್ತಾವನೆಗಳ ಸಂಖ್ಯೆ DTCP-11-MPP-2017-18, ದಿನಾಂಕ 02.03.2019 ಮತ್ತು 05.09.2019.

*******

**ಪ್ರಸ್ತಾವನೆ:**

ಮೇಲೆ ಓದಲಾದ ಸಂಖ್ಯೆ: (1) ರ ಸರ್ಕಾರದ ಅಧಿಸೂಚನೆಯಲ್ಲಿ, ಮಾಲೂರು ಪಟ್ಟಣದ ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಎ)ರನ್ವಯ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿರುತ್ತದೆ. ಉಲ್ಲೇಖ(2)ರ ಸರ್ಕಾರದ ಅಧಿಸೂಚನೆಯಲ್ಲಿ ಮಾಲೂರು ಸ್ಥಳೀಯ ಯೋಜನಾ ಪ್ರಾಧಿಕಾರವನ್ನು ರಚಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರಗಳಲ್ಲಿ ಮಾಲೂರು ಯೋಜನಾ ಪ್ರಾಧಿಕಾರ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೊಜನಾ ಕಾಯ್ದೆ ಕಲಂ 1961ರ ಕಲಂ 9(1) ರನ್ವಯ ಮಾಲೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ (ತಾತ್ಕಾಲಿಕ) ಯನ್ನು ಸಿದ್ದಪಡಿಸಿ ಸದರಿ ಕಾಯ್ದೆಯ ಕಲಂ 13(1) ರನ್ವಯ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರದ ಅನುಮೋದನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಇವರ ಪ್ರಸ್ತಾವನೆಗಳಲ್ಲಿ, ಮಾಲೂರು ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯ ಜನಸಂಖ್ಯೆಯು 2031ರಲ್ಲಿ 1,50,000 ಗಳಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾಯೋಜನೆಯನ್ನು ತಯಾರಿಸಲಾಗಿದೆ. ಮಾಲೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಒಟ್ಟು 2712.44 ಹೆಕ್ಟೇರ್ ಪ್ರದೇಶವನ್ನು ನಗರದ ಅಭಿವೃದ್ಧಿಗಾಗಿ ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ, ಮಹಾಯೋಜನೆಯನ್ನು ರೂಪಿಸಲಾಗಿದೆ. ನಗರದ ಮುಂದಿನ ಯೋಜಿತ ಬೆಳವಣಿಗೆಗೆ ಪ್ರಸ್ತಾಪಿಸಿರುವ 2712.44 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 1333.83 ಹೆಕ್ಟೇರ್ (ಶೇ.49.17),ವಾಣಿಜ್ಯಕ್ಕಾಗಿ 105.88 ಹೆಕ್ಟೇರ್ (ಶೇ.3.90), ಕೈಗಾರಿಕೆಗಾಗಿ 377.55 ಹೆಕ್ಟೇರ್, (ಶೇ.13.92), ಸಾರ್ವಜನಿಕ / ಅರೆ ಸಾರ್ವಜನಿಕ ಉಪಯೋಗಕ್ಕೆ 129.33 ಹೆಕ್ಟೇರ್ (ಶೇ.4.77), ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ 271.26 ಹೆಕ್ಟೇರ್ (ಶೇ.10.00), ಸಾರ್ವಜನಿಕ ಉಪಯುಕ್ತತೆಗಾಗಿ 4.23 ಹೆಕ್ಟೇರ್, (ಶೇ.0.16) ಹಾಗೂ ಸಾರಿಗೆ ಸಂಪರ್ಕವಲಯಕ್ಕೆ 490.36 ಹೆಕ್ಟೇರ್ (ಶೇ.18.08) ಪ್ರದೇಶದ ಭೂ ಉಪಯೋಗವನ್ನು ನಿಗದಿಪಡಿಸಲಾಗಿದೆ. ಮಹಾಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಸದರಿ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೊಜನಾ ಕಾಯ್ದೆ, 1961ರ ಪ್ರಕರಣ 13(1)ರನ್ವಯ ತಾತ್ಕಾಲಿಕ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 51 ಬೆಂರೂಪ್ರಾ 2019, ಬೆಂಗಳೂರು, ದಿನಾಂಕ:24.12.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೋಲಾರ ಜಿಲ್ಲೆ, ಮಾಲೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಪ್ರಸ್ತಾಪಿಸಿರುವ 2712.44 ಹೆಕ್ಟೇರ್ ಪ್ರದೇಶದ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಪ್ರಕರಣ 13(1) ರನ್ವಯ ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ತಾತ್ಕಾಲಿಕ ಅನುಮೋದನೆ ನೀಡಲಾಗಿದೆ. ಮಹಾಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

೧. ಮಾಲೂರು ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಜಲಾವೃತ ಪ್ರದೇಶ(ಕೆರೆಗಳು), ನಾಲೆ/ಕಾಲುವೆಗಳಿಗೆ ಸೂಕ್ತ ಅಳತೆಯ ಅಗಲದ ಬಫರ್ ನಿಗಧಿಪಡಿಸುವ ಅವಶ್ಯಕವಿರುತ್ತದೆ. ಬಫರ್ ಜಾಗ ಗುರಿತಿಸಲಾಗಿರುವ ನಾಲೆ / ಕಾಲವೆಗಳ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ವಿವಿಧ ಅಳತೆಯ ಬಫರ್ ಪ್ರಸ್ತಾಪಿಸಿದಲ್ಲಿ ಅವುಗಳನ್ನು ನಿಖರವಾಗಿ ಮಹಾಯೋಜನೆ ನಕ್ಷೆಯಲ್ಲಿ ಗುರುತಿಸಕ್ಕದ್ದು. ಜಲಾವೃತ ಪ್ರದೇಶ ನಾಲೆ / ಕಾಲುವೆಗಳ ಎಲ್ಲೆಯಿಂದ ಎಷ್ಟು ಅಂತರದವರೆಗೆ ಬಫರ್ ಕಾಯ್ದಿರಿಸಬೇಕು ಎಂಬುದರ ಬಗ್ಗೆ ವಲಯ ನಿಯಮಾವಳಿಯಲ್ಲಿಯೂ ಸಹ ಸೂಕ್ತವಾಗಿ ಅಳವಡಿಸಿಕೊಳ್ಳತಕ್ಕದ್ದು ಹಾಗೂ ಗ್ರಾಮ ನಕ್ಷೆಗಳಲ್ಲಿನ ಕೊರಕಲು / ಬಂಡಿದಾರಿ ಮುಂತಾದ ಖರಾಬು ಜಾಗಗಳನ್ನು ನಕ್ಷೆಯಲ್ಲಿ ಅಳವಡಿಸಿಕೊಳ್ಳತಕ್ಕದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಸಿ. ಎಸ್. ಶಿವಕುಮಾರಸ್ವಾಮಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

PR-17

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಜಲಸಂಪನ್ಮೂಲ ಇಲಾಖೆಯ ಕಿರಿಯ ಅಭಿಯಂತರರು (ಸಿವಿಲ್ ಮತ್ತು ಮೆಕ್ಯಾನಿಕಲ್) ಇವರನ್ನು ಸಹಾಯಕ ಅಭಿಯಂತರರು-2 ವೃಂದಕ್ಕೆ ಬಡ್ತಿಗಾಗಿ ಕಿರಿಯ ಅಭಿಯಂತರರು (ಸಿವಿಲ್) ಮತ್ತು ಕಿರಿಯ ಅಭಿಯಂತರರು (ಮೆಕ್ಯಾನಿಕಲ್) ವೃಂದದಿಂದ 10 : 1 ರ ಅನುಪಾತದಲ್ಲಿ ಬಡ್ತಿ ನೀಡುವ ಬಗ್ಗೆ ಕಾರ್ಯಕಾರಿ ಆದೇಶ.

**ಓದಲಾಗಿದೆ**
1) ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 293 ಸೇಸಕಿ 2005, ದಿನಾಂಕ 03.12.2014.
2) ಸರ್ಕಾರದ ಆದೇಶ ಸಂಖ್ಯೆ: ಜಸಂಇ 06 ಸೇಎಸು 2015, ದಿನಾಂಕ 25.11.2019.
3) ಸರ್ಕಾರದ ಆದೇಶ ಸಂಖ್ಯೆ ಜಸಂಇ 208 ಸೇಎಸು 2019, ದಿನಾಂಕ: 04.12.2019

4) ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸೇವೆಗಳು–ಬಿ) ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಜಸಂಇ 114 ಸೇಇಸಿ 2019 ದಿನಾಂಕ: 20.12.2019.

**********

**ಪ್ರಸ್ತಾವನೆ :**

ಮೇಲೆ (1)ರಲ್ಲಿ ಓದಲಾದ ದಿನಾಂಕ:03.12.2014ರ ಸರ್ಕಾರದ ಅಧಿಸೂಚನೆಯಲ್ಲಿ ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಂತಿಮಗೊಳಿಸಿ ದಿನಾಂಕ: 11.12.2014ರಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

2. ಮೇಲೆ (2)ರಲ್ಲಿ ಓದಲಾದ ದಿನಾಂಕ 25.11.2019ರ ಸರ್ಕಾರದ ಆದೇಶದಲ್ಲಿ ದಿನಾಂಕ: 02/08/2018ರಂದು ನಡೆದ ಸಚಿವ ಸಂಪುಟ ಸಭೆಯು ತೆಗೆದುಕೊಂಡ ನಿರ್ಣಯದಂತೆ ಜಲಸಂಪನ್ಮೂಲ ಇಲಾಖೆಯಲ್ಲಿ ನಿಯೋಜನೆ/ವರ್ಗಾವಣೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಲೋಕೋಪಯೋಗಿ ಇಲಾಖೆ ಹಾಗೂ ಇತರೆ ಇಲಾಖೆಗಳಿಂದ ನೇಮಕಗೊಂಡಿರುವ ಅಧಿಕಾರಿ/ನೌಕರರ ಸೇವೆಯನ್ನು ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವರ್ಗಾವಣೆ ಮೂಲಕ ನೇಮಿಸಿಕೊಳ್ಳಲು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 16(ಎ)(ii) ರನ್ವಯ ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ಶಾಶ್ವತ ವರ್ಗಾವಣೆ ಮುಖೇನ ಒಂದು ಬಾರಿಗೆ ಮಾತ್ರ ಅಭಿಮತ ಸಲ್ಲಿಸಲು ಆದೇಶ ಹೊರಡಿಸಲಾಗಿದೆ.

3. ಮೇಲೆ (3)ರಲ್ಲಿ ಓದಲಾದ ದಿನಾಂಕ 04.12.2019ರ ಆದೇಶದಲ್ಲಿ ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿಗಳಿಗೆ ತಿದ್ದುಪಡಿ ತರುವ ಷರತ್ತಿಗೆ ಒಳಪಟ್ಟು, ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದನ್ವಯ ಅಧಿಸೂಚನೆ ಸಂಖ್ಯೆ ಜಸಂಇ 104 ಸೇಸಕಿ 2016, ದಿನಾಂಕ: 28/11/2017ರಲ್ಲಿ ಪ್ರಕಟವಾಗಿರುವ ಸಹಾಯಕ ಅಭಿಯಂತರರ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಆಧಾರವಾಗಿರಿಸಿಕೊಂಡು ಸಹಾಯಕ ಇಂಜಿನಿಯರ್ (ಸಿವಿಲ್) ಹಾಗೂ ಸಹಾಯಕ ಅಭಿಯಂತರರು (ಮೆಕ್ಯಾನಿಕಲ್) ಇವರ ಜೇಷ್ಠತೆಗೆ ಅನುಗುಣವಾಗಿ working list ಅನ್ನು ಸಿದ್ಧಪಡಿಸಿ, ಸಹಾಯಕ ಅಭಿಯಂತರರು (ಸಿವಿಲ್) ಮತ್ತು ಸಹಾಯಕ ಅಭಿಯಂತರರು (ಮೆಕ್ಯಾನಿಕಲ್) ಇವರಿಗೆ ಕ್ರಮವಾಗಿ 10:1 ರ ಅನುಪಾತದಲ್ಲಿ (10:1 Ratio) ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ಬಡ್ತಿ ನೀಡಲು ಕಾರ್ಯಕಾರಿ ಆದೇಶವನ್ನು ಹೊರಡಿಸಿದೆ.

4. ಮೇಲೆ (4)ರಲ್ಲಿ ಓದಲಾದ ದಿನಾಂಕ: 20.12.2019ರ ಅನದಿಕೃತ ಟಿಪ್ಪಣಿಯಲ್ಲಿ ಕರ್ನಾಟಕ ಜಲಸಂಪನ್ಮೂಲ ಸೇವೆಗಳು (ನೇಮಕಾತಿ) ನಿಯಮಗಳು 2014ರಲ್ಲಿ ಕಿರಿಯ ಅಭಿಯಂತರರ ಹುದ್ದೆಯಿಂದ ಸಹಾಯಕ ಇಂಜಿನಿಯರ್ (ವಿಭಾಗ–2) ವೃಂದಕ್ಕೆ ಪದೋನ್ನತಿ ನೀಡಲು ಅವಕಾಶ ಕಲ್ಪಿಸಲಾಗಿದ್ದು, ಸದರಿ ನಿಯಮಗಳಲ್ಲಿ ಸಿವಿಲ್ ಮತ್ತು ಮೆಕ್ಯಾನಿಕಲ್ ವೃಂದಗಳಿಗೆ ಅನುಪಾತವನ್ನು ನಿಗದಿಪಡಿಸಿರುವುದಿಲ್ಲ. ಜಲಸಂಪನ್ಮೂಲ ಇಲಾಖೆಗೆ ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್‌ಗಳನ್ನು 2009ರಿಂದ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ನೇಮಕಾತಿ ಸಂದರ್ಭದಲ್ಲಿ ಶೇಕಡ–90 ಡಿಪ್ಲೋಮೊ ಇನ್ ಸಿವಿಲ್ ಮತ್ತು ಶೇಕಡ–10 ರಷ್ಟು ಡಿಪ್ಲೋಮೊ ಇನ್ ಮೆಕ್ಯಾನಿಕಲ್ ಆಯ್ಕೆಗೆ ಪರಿಗಣಿಸಲಾಗಿರುತ್ತದೆ. ಆದರೆ, ಕರ್ನಾಟಕ ಜಲಸಂಪನ್ಮೂಲ ಸೇವೆಗಳು(ನೇಮಕಾತಿ) ನಿಯಮಗಳು 2014ರಲ್ಲಿ ಕಿರಿಯ ಅಭಿಯಂತರರು

ಹುದ್ದೆಯಿಂದ ಸಹಾಯಕ ಇಂಜಿನಿಯರ್–2 ವೃಂದಕ್ಕೆ ಪದೋನ್ನತಿ ನೀಡಲು ಸಿವಿಲ್ ಮತ್ತು ಮೆಕ್ಯಾನಿಕಲ್ ವೃಂದಗಳೆಂದು ಪ್ರತ್ಯೇಕವಾಗಿ ಗುರುತಿಸಿರುವುದಿಲ್ಲ. ಆದುದರಿಂದ ಸಹಾಯಕ ಇಂಜಿನಿಯರ್ ವೃಂದದಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದಕ್ಕೆ 10:1ರ ಪ್ರಮಾಣದಲ್ಲಿ ಮುಂಬಡ್ತಿ ನೀಡಲು ಅನುಕೂಲವಾಗುವಂತೆ ಆದೇಶ ಸಂಖ್ಯೆ: ಜಸಂಇ 208 ಸೇಎಸು 2019 ದಿನಾಂಕ: 04/12/2019ರಲ್ಲಿ ಕಾರ್ಯಕಾರಿ ಆದೇಶವನ್ನು ಹೊರಡಿಸಿರುವ ರೀತಿಯಲ್ಲಿ ಕಿರಿಯ ಅಭಿಯಂತರರ ಹುದ್ದೆಯಿಂದ ಸಹಾಯಕ ಅಭಿಯಂತರರು–2 ವೃಂದಕ್ಕೆ ಪದೋನ್ನತಿ ನೀಡಲು 10:1 ಪ್ರಮಾಣವನ್ನು ನಿಗದಿಪಡಿಸಿ, ಕಾರ್ಯಕಾರಿ ಆದೇಶವನ್ನು ಹೊರಡಿಸಲು ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

5. ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರು ದಿನಾಂಕ:30.05.2008ರ ಪತ್ರದ ಅನ್ವಯ ಜಲಸಂಪನ್ಮೂಲ ಇಲಾಖೆಯಲ್ಲಿ ಸಹಾಯಕ ಅಭಿಯಂತರರು, ಮೆಕ್ಯಾನಿಕಲ್ ಎಂಬ ಹುದ್ದೆ ಪ್ರತ್ಯೇಕವಾಗಿ ಇರುವುದಿಲ್ಲವೆಂದೂ ಹೈಡ್ರಾಲಜಿ ಮತ್ತು ಕೇಂದ್ರ ಯಾಂತ್ರಿಕ ಸಂಸ್ಥೆಗೆ ಮಂಜೂರಾಗಿರುವ ಸಹಾಯಕ ಇಂಜಿನಿಯರ್ (ಮೆಕ್ಯಾನಿಕಲ್) ಹುದ್ದೆಗಳಿಗೆ ಆಯ್ಕೆಯಾಗಿರುವ ಸಹಾಯಕ ಇಂಜಿನಿಯರ್ (ಮೆಕ್ಯಾನಿಕಲ್) ರವರನ್ನು ನಿಯೋಜಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

6. ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬೃಹತ್ ಮತ್ತು ಸಣ್ಣ ಕಾಮಗಾರಿಗಳು ಪ್ರಮುಖವಾಗಿ ಸಿವಿಲ್ ವಿಷಯಕ್ಕೆ ಸಂಬಂಧಪಟ್ಟ ಕಾಮಗಾರಿಗಳಾಗಿದ್ದು, ಡಿಪ್ಲೊಮೋ (ಸಿವಿಲ್) ಪದವಿ ಪಡೆದ ಅನುಭವ ಇರುವ ಅಧಿಕಾರಿಯ ಸೇವೆ ಅತ್ಯಗತ್ಯವಾಗಿರುತ್ತದೆ ಹಾಗೂ ಪ್ರಸ್ತುತ ಇರುವ ಕರಡು ಜೇಷ್ಠತಾ ಪಟ್ಟಿಯನ್ವಯ ಡಿಪ್ಲೊಮೋ (ಮೆಕ್ಯಾನಿಕಲ್) ಪದವಿ ಪಡೆದ ಅಭಿಯಂತರರುಗಳಿಗೆ ಸಹಾಯಕ ಇಂಜಿನಿಯರ್–2 ಹುದ್ದೆಗೆ ಬಡ್ತಿ ನೀಡಿದಲ್ಲಿ ಮುಂದಿನ ದಿನಗಳಲ್ಲಿ ಮೆಕ್ಯಾನಿಕಲ್ ಅಭಿಯಂತರರೇ ಸಹಾಯಕ ಕಾರ್ಯಪಾಲಕ ಅಭಿಯಂತರರು–2 ಹುದ್ದೆಗಳಿಗೆ ಬಡ್ತಿ ಹೊಂದಲಿದ್ದು, ಸದರಿ ಅಭಿಯಂತರರು ಸಿವಿಲ್ ವಿಷಯದಲ್ಲಿ ಅನುಭವ ಇಲ್ಲದಿದ್ದಲ್ಲಿ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದಲ್ಲಿ ಕಾರ್ಯಸಾಧ್ಯ ಮಾಡಲು ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ ಕಿರಿಯ ಅಭಿಯಂತರರು (ಸಿವಿಲ್) ಮತ್ತು ಕಿರಿಯ ಅಭಿಯಂತರರು (ಮೆಕ್ಯಾನಿಕಲ್) ಇವರಿಗೆ ಕ್ರಮವಾಗಿ 10:1ರ ಅನುಪಾತದಲ್ಲಿ (10:1 Ratio) ಸಹಾಯಕ ಅಭಿಯಂತರರ–2 ಹುದ್ದೆಗೆ ಬಡ್ತಿ ನೀಡುವುದು ಸೂಕ್ತವಾಗಿರುತ್ತದೆ.

7. ಜಲಸಂಪನ್ಮೂಲ ಇಲಾಖೆಯಲ್ಲಿ ಬರುವ ಎಲ್ಲಾ ಬೃಹತ್, ಮಧ್ಯಮ ಮತ್ತು ಸಣ್ಣ ಕಾಮಗಾರಿಗಳನ್ನು ಮುಖ್ಯವಾಗಿ ಸಿವಿಲ್ ಅಭಿಯಂತರರು ನಿರ್ವಹಿಸಬೇಕಾಗಿರುತ್ತದೆ. ಮೆಕ್ಯಾನಿಕಲ್ ಇಂಜಿನಿಯರ್ ರವರು ಕೇಂದ್ರ ಯಾಂತ್ರಿಕ ಸಂಸ್ಥೆ, ಗೇಜಿಂಗ್ ಘಟಕ, ಡ್ಯಾಂಗಳ ಗೇಟ್ ಹಾಗೂ ಇತರ ಯಾಂತ್ರಿಕ ನಿರ್ವಹಣೆಗಳನ್ನು ಮಾತ್ರ ನಿರ್ವಹಿಸಬೇಕಾಗಿರುತ್ತದೆ. ಆಡಳಿತದ ಹಿತದೃಷ್ಟಿಯಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ತರಲು ಹೆಚ್ಚಿನ ಕಾಲಾವಕಾಶ ಬೇಕಾಗಿದ್ದು ತಿದ್ದುಪಡಿ ತರುವ ಷರತ್ತಿಗೊಳಪಟ್ಟು ಕಾರ್ಯಕಾರಿ ಆದೇಶ ಹೊರಡಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಕೆಳಕಂಡ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ ಜಸಂಇ 208 ಸೇಎಸು 2019 ಬೆಂಗಳೂರು, ದಿನಾಂಕ:17.01.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಷರತ್ತಿಗೆ ಒಳಪಟ್ಟು, ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದನ್ವಯ ಕಿರಿಯ ಅಭಿಯಂತರರು (ಸಿವಿಲ್) ಹಾಗೂ ಕಿರಿಯ ಅಭಿಯಂತರರು (ಮೆಕ್ಯಾನಿಕಲ್) ಇವರ ಜೇಷ್ಠತೆಗೆ

ಅನುಗುಣವಾಗಿ working list ಅನ್ನು ಸಿದ್ಧಪಡಿಸಿ, ಕಿರಿಯ ಅಭಿಯಂತರರು (ಸಿವಿಲ್) ಮತ್ತು ಕಿರಿಯ ಅಭಿಯಂತರರು (ಮೆಕ್ಯಾನಿಕಲ್) ಇವರಿಗೆ ಕ್ರಮವಾಗಿ 10:1 ರ ಅನುಪಾತದಲ್ಲಿ (10:1 Ratio) ಸಹಾಯಕ ಅಭಿಯಂತರರ–2 ಹುದ್ದೆಗೆ ಬಡ್ತಿ ನೀಡಲು ಕಾರ್ಯಕಾರಿ ಆದೇಶವನ್ನು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

**(ಕೆ. ಎಲ್. ಪ್ರಸಾದ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸೇವೆಗಳು–ಎ).

PR-18

ಕರ್ನಾಟಕಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯಹಾಜರಾತಿ) ನಿಯಮಗಳು,1963 ರಡಿಯಲ್ಲಿ ಶ್ರೀಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಮೈಸೂರು ಶಾಖೆ ಮತ್ತು ಕಲಬುರಗಿ ಶಾಖೆಯಲ್ಲಿ ಪಡೆದ ಚಿಕಿತ್ಸೆಯನ್ನು ಸರ್ಕಾರಿ ನೌಕರರ ವೈದ್ಯಕೀಯ ವೆಚ್ಚ ಮರುಪಾವತಿಗೆ ಪರಿಗಣಿಸುವ ಬಗ್ಗೆ.

**ಓದಲಾಗಿದೆ:** ನಿರ್ದೇಶಕರು,ಶ್ರೀಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಪತ್ರ, ದಿನಾಂಕ:12.06.2019.

****

ಪ್ರಸ್ತಾವನೆ:

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 ರಡಿಯಲ್ಲಿ ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರು ಸರ್ಕಾರಿ ಆಸ್ಪತ್ರೆಗಳು ಮತ್ತು ಸರ್ಕಾರ ದಿಂದ ಮಾನ್ಯತೆ ಹೊಂದಿರುವ ಆಸ್ಪತ್ರೆಗಳಲ್ಲಿ ಪಡೆಯುವ ಚಿಕಿತ್ಸೆಯ ಅರ್ಹತಾಮೊತ್ತವನ್ನು ಮರುಪಾವತಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

ಸದರಿ ನಿಯಮಾವಳಿಯ ನಿಯಮ 3(**CC**)ರಂತೆ ಶ್ರೀ ಜಯದೇವ ಹೃದ್ರೋಗವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು (Sri Jayadeva Institute of Cardiovascular Sciences and Research, Bangalore) ಈ ಸಂಸ್ಥೆಯಲ್ಲಿ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರು ಪಡೆಯುವ ವೈದ್ಯಕೀಯ ಚಿಕಿತ್ಸೆಯ ವೆಚ್ಚದ ಅರ್ಹತಾ ಮೊತ್ತವನ್ನು ಮರುಪಾವತಿ ಪಡೆಯಲು ಅರ್ಹರಿರುತ್ತಾರೆ.

ಮೇಲೆ ಓದಲಾದ ದಿನಾಂಕ: 12.06.2019 ರ ಪತ್ರದಲ್ಲಿ ನಿರ್ದೇಶಕರು, ಶ್ರೀಜಯದೇವಹೃದ್ರೋಗವಿಜ್ಞಾನಮತ್ತು ಸಂಶೋಧನಾಸಂಸ್ಥೆ, ಬೆಂಗಳೂರು ಇವರು ಈ ಸಂಸ್ಥೆಯ ಮೈಸೂರು ಮತ್ತು ಕಲಬುರಗಿ ಶಾಖೆಗಳು ಪ್ರಾರಂಭಗೊಂಡಿದ್ದು, ಸದರಿ ಶಾಖೆಗಳಲ್ಲಿ ಸರ್ಕಾರಿ ನೌಕರರು ಮಾಡಿಸಿಕೊಳ್ಳುವ ವೈದ್ಯಕೀಯ ತಪಾಸಣೆಯ ಸಂಬಂಧದಲ್ಲಿ ಕೆಲವೊಂದು ಇಲಾಖೆಗಳಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿಯನ್ನು ನಿರಾಕರಿಸುತ್ತಿರುವುದು ತಿಳಿದು ಬಂದಿರುವುದರಿಂದ ಸಂಸ್ಥೆಯ ಮೈಸೂರು ಮತ್ತು ಕಲಬುರಗಿ ಶಾಖೆಗಳಲ್ಲಿ ಸರ್ಕಾರಿ ನೌಕರರು ಪಡೆಯುವ ಚಿಕಿತ್ಸೆಯ ವೈದ್ಯಕೀಯ ವೆಚ್ಚ ಮರುಪಾವತಿಯನ್ನು ಪರಿಗಣಿಸಲು ಅಧಿಸೂಚಿಸುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 14 ಎಸ್‌ಎಂಆರ್ 2019, ದಿನಾಂಕ: 07.09.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕಸರ್ಕಾರಿನೌಕರರ (ವೈದ್ಯಕೀಯಹಾಜರಾತಿ) ನಿಯಮಗಳು, 1963ರ ನಿಯಮ 3(cc)ಗೆ ಈ ಸಂಬಂಧದಲ್ಲಿ ಸೂಕ್ತ ತಿದ್ದುಪಡಿಯನ್ನು ಬಾಕಿ ಇರಿಸಿ, ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗವಿಜ್ಞಾನಮತ್ತುಸಂಶೋಧನಾಸಂಸ್ಥೆಯ (ಕೇಂದ್ರ ಶಾಖೆ) ಕೆಳಕಂಡ ಮೈಸೂರು ಮತ್ತು ಕಲಬುರಗಿ ಶಾಖೆಗಳಲ್ಲಿ ಸರ್ಕಾರಿ ನೌಕರರು ಮತ್ತುಅವರ ಕುಟುಂಬದ ಅವಲಂಬಿತಸದಸ್ಯರು ಪಡೆಯುವ ವೈದ್ಯಕೀಯ ಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ಅರ್ಹತಾ ಮೊತ್ತವನ್ನು ಮರುಪಾವತಿ ಪಡೆಯಲು ಅರ್ಹರಾಗಿರುತ್ತಾರೆ ಎಂದು ಆದೇಶಿಸಿದೆ.

ಮೈಸೂರುಶಾಖೆ:

ಶ್ರೀಜಯದೇವಹೃದ್ರೋಗವಿಜ್ಞಾನಮತ್ತುಸಂಶೋಧನಾಸಂಸ್ಥೆ,
ಕೆ.ಆರ್.ರಸ್ತೆ, ಕುಂಬಾರಕೊಪ್ಪಲು,
ಮೈಸೂರು– 570 016.

ಕಲಬುರಗಿಶಾಖೆ:

ಶ್ರೀಜಯದೇವಹೃದ್ರೋಗವಿಜ್ಞಾನಮತ್ತುಸಂಶೋಧನಾಸಂಸ್ಥೆ,
ಜಿಮ್‌ಸ್‌ಟೀಚಿಂಗ್‌ಆಸ್ಪತ್ರೆಯಆವರಣ, ಶಿನೇಮಹಡಿ, ಸೇಡಂರಸ್ತೆ,
ಕಲಬುರಗಿ– 585105.

ಕರ್ನಾಟಕರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ವಿ.ಶೈಲಜ)
ಸರ್ಕಾರದಅಧೀನಕಾರ್ಯದರ್ಶಿ
ಸಿಬ್ಬಂದಿಮತ್ತುಆಡಳಿತಸುಧಾರಣೆಇಲಾಖೆ
(ಸೇವಾನಿಯಮಗಳು–2).

PR-19

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯ ಅಧಿಕಾರಿಗಳ ಸಂಘಕ್ಕೆ ವಾರ್ಷಿಕ ಸದಸ್ಯತ್ವ ಶುಲ್ಕವನ್ನು ಪಾವತಿ ಮಾಡುವ ಬಗ್ಗೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 2 ಸೇಸವಿ 2019, ಬೆಂಗಳೂರು, ದಿನಾಂಕ: 27.01.2020**

**ಓದಲಾಗಿದೆ:–**

೧. ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಸಚಿವಾಲಯ ಅಧಿಕಾರಿಗಳ ಸಂಘ ಇವರ ಪತ್ರ ಸಂಖ್ಯೆ: ಕಸಸಅಸಂ/15/2019, ದಿನಾಂಕ: 27.04.2019.

೨. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 2 ಸೇಸವಿ 2019, ದಿನಾಂಕ 14.11.2019.

**ಪ್ರಸ್ತಾವನೆ:–**

ಕರ್ನಾಟಕ ಸರ್ಕಾರ ಸಚಿವಾಲಯ ಅಧಿಕಾರಿಗಳ ಸಂಘದ ವಾರ್ಷಿಕ ಸದಸ್ಯತ್ವ ಶುಲ್ಕವನ್ನು ನೀಡಬಯಸುವ ಅಧಿಕಾರಿಗಳಿಂದ ವಾರ್ಷಿಕ ವಂತಿಗೆಯನ್ನು ಅಧಿಕಾರಿಗಳ ವೇತನದಿಂದ ಕಟಾವು ಮಾಡಲು ಪ್ರತಿ ವರ್ಷ ಸರ್ಕಾರದಿಂದ ಆದೇಶ ಹೊರಡಿಸಲಾಗುತ್ತಿದೆ. ಈ ರೀತಿ ಪ್ರತಿ ವರ್ಷ ಆದೇಶ ಹೊರಡಿಸುವ ಬದಲು ಪ್ರತಿ ವರ್ಷಕ್ಕೆ ಅನ್ವಯವಾಗುವಂತೆ ಆದೇಶ ಹೊರಡಿಸುವಂತೆ ಮೇಲೆ (೧)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ. ಅದರಂತೆ, ಸರ್ಕಾರವು ಮೇಲೆ (೨)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ೨೦೧೯ನೇ ಸಾಲಿಗೆ

ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಸಚಿವಾಲಯ ಅಧಿಕಾರಿಗಳ ಸಂಘದ ವಾರ್ಷಿಕ ವಂತಿಗೆಯನ್ನು ಡಿಸೆಂಬರ್ ತಿಂಗಳ ವೇತನದಲ್ಲಿ ಹಾಗೂ ಮುಂಬರುವ ವರ್ಷಗಳಲ್ಲಿ ಮೇ ಅಥವಾ ಜೂನ್ ತಿಂಗಳ ವೇತನದಲ್ಲಿ ಕಟಾವಣೆಗೊಳಿಸಲು ಆದೇಶಿಸಲಾಗಿತ್ತು. ಆದರೆ, ನವೆಂಬರ್–ಡಿಸೆಂಬರ್ 2019 ತಿಂಗಳುಗಳಲ್ಲಿ ವೇತನಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳು ಹಾಗೂ ಸಂಬಳ ನಿಧಿಯನ್ನು ಖಜಾನೆ–01 ರಿಂದ ಖಜಾನೆ-02 ಕ್ಕೆ ವರ್ಗಾಯಿಸುವ ಪ್ರಕ್ರಿಯೆಗಳು ನಡೆಯುತ್ತಿದ್ದರಿಂದ ಹಾಗೂ ಇನ್ನಿತರ ತಾಂತ್ರಿಕ ಕಾರಣಗಳಿಂದ ಡಿಸೆಂಬರ್ 2019ರ ತಿಂಗಳ ವೇತನದಿಂದ ಸಚಿವಾಲಯದ ಅಧಿಕಾರಿಗಳ ವಾರ್ಷಿಕ ಸದಸ್ಯತ್ವ ಶುಲ್ಕವನ್ನು ಕಟಾವಣೆಗೊಳಿಸಲಾಗಿರುವುದಿಲ್ಲವೆಂದು ತಿಳಿದು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ, ಡಿಸೆಂಬರ್ 2019ರ ವೇತನದಲ್ಲಿ ಕಡಿತಗೊಳಿಸಬೇಕಾಗಿದ್ದ ಸಂಘದ 2019ನೇ ಸಾಲಿನ ವಾರ್ಷಿಕ ವಂತಿಗೆಯನ್ನು 2020ರ ಫೆಬ್ರವರಿ ತಿಂಗಳ ವೇತನದಲ್ಲಿ ಕಟಾವಣೆಗೊಳಿಸಲು ಕ್ರಮ ಕೈಗೊಳ್ಳುವುದು ಅವಶ್ಯವೆಂದು ಪರಿಗಣಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಡಿಸೆಂಬರ್ 2019ರ ತಿಂಗಳ ವೇತನದಲ್ಲಿ ಕಟಾವಣೆಗೊಳ್ಳಬೇಕಿದ್ದ 2019ನೇ ಸಾಲಿನ ಕರ್ನಾಟಕ ಸರ್ಕಾರ ಸಚಿವಾಲಯ ಅಧಿಕಾರಿಗಳ ಸಂಘದ ವಾರ್ಷಿಕ ಸದಸ್ಯತ್ವ ಶುಲ್ಕ ರೂ.120/-ಅನ್ನು **2020ರ ಫೆಬ್ರವರಿ** ತಿಂಗಳ ವೇತನದಿಂದ ಕಡಿತಗೊಳಿಸಲು ಅನುಮತಿಸಲಾಗಿದೆ. ಈ ಸದಸ್ಯತ್ವ ಶುಲ್ಕವನ್ನು ನೀಡಲು ಸಂಘದ ಯಾವುದೇ ಸದಸ್ಯರು ಒಪ್ಪದಿದ್ದಲ್ಲಿ ಅವರು ತಮ್ಮ ವೇತನದಿಂದ ಸಂಘದ ಸದಸ್ಯತ್ವ ಶುಲ್ಕವನ್ನು ಕಡಿತಗೊಳಿಸಲು ತಮ್ಮ ಅಸಮ್ಮತಿಯನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇ(ಲೆಕ್ಕಪತ್ರ–I) ಇವರಿಗೆ ದಿನಾಂಕ: **05.02.2020**ರ ಒಳಗಾಗಿ ಲಿಖಿತ ರೂಪದಲ್ಲಿ ತಿಳಿಸಬಹುದಾಗಿದೆ. ಮುಂಬರುವ ವರ್ಷಗಳಿಗೆ ಸಂಬಂಧಿಸಿದಂತೆ ದಿನಾಂಕ:೧೪.೧೧.೨೦೧೯ರ ಸರ್ಕಾರಿ ಆದೇಶದಲ್ಲಿನ ಷರತ್ತುಗಳೇ ಅನ್ವಯವಾಗುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.
(ಗಾಯತ್ರಿ ಎಂ.ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು–೧)

PR-20

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಸರ್ಕಾರದ ಸಚಿವಾಲಯದ ನೌಕರರ ಸಂಘಕ್ಕೆ ವಾರ್ಷಿಕ ಸದಸ್ಯತ್ವ ಶುಲ್ಕವನ್ನು ಪಾವತಿ ಮಾಡುವ ಬಗ್ಗೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಸೇಸವಿ 2019, ಬೆಂಗಳೂರು, ದಿನಾಂಕ: 27.01.2020**

ಓದಲಾಗಿದೆ:-

1. ಪ್ರಧಾನ ಕಾರ್ಯದರ್ಶಿ,ಕರ್ನಾಟಕ ಸರ್ಕಾರ ಸಚಿವಾಲಯದ ನೌಕರರ ಸಂಘ ಇವರ ಪತ್ರ ಸಂಖ್ಯೆ: ಕಸಸ/75/2019, ದಿನಾಂಕ: 17.08.2019.
2. ಸರ್ಕಾರಿಆದೇಶಸಂಖ್ಯೆ :ಸಿಆಸುಇ 1 ಸೇಸವಿ 2019 ದಿನಾಂಕ:14.11.2019.

**ಪ್ರಸ್ತಾವನೆ:-**

ಕರ್ನಾಟಕ ಸರ್ಕಾರ ಸಚಿವಾಲಯದ ನೌಕರರ ಸಂಘದ ವಾರ್ಷಿಕ ಸದಸ್ಯತ್ವ ಶುಲ್ಕವನ್ನು ನೀಡಬಯಸುವ ನೌಕರರಿಂದ ಸಂಘಕ್ಕೆ ವಾರ್ಷಿಕವಂತಿಗೆಯನ್ನು ನೌಕರರವೇತನದಿಂದ ಕಟಾವು ಮಾಡಲು ಪ್ರತಿವರ್ಷ ಸರ್ಕಾರದಿಂದ ಆದೇಶ ಹೊರಡಿಸಲಾಗುತ್ತಿದೆ. ಈ ರೀತಿ ಪ್ರತಿ ವರ್ಷ ಆದೇಶ ಹೊರಡಿಸುವಬದಲು ಪ್ರತಿವರ್ಷಕ್ಕೆ ಅನ್ವಯವಾಗುವಂತೆ ಅಗತ್ಯ ಆದೇಶ ಹೊರಡಿಸುವಂತೆ ಮೇಲೆ (1) ರಲ್ಲಿ ಓದಲಾದಪತ್ರದಲ್ಲಿಕೋರಿರುತ್ತಾರೆ. ಅದರಂತೆ, ಸರ್ಕಾರವುಮೇಲೆ (೨)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2019ನೇಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘದ ವಾರ್ಷಿಕವಂತಿಗೆಯನ್ನು ಡಿಸೆಂಬರ್ ತಿಂಗಳವೇತನದಲ್ಲಿ ಹಾಗೂ ಮುಂಬರುವ ವರ್ಷಗಳಲ್ಲಿ ಆಗಸ್ಟ್ ಅಥವಾ ಸೆಪ್ಟಂಬರ್ ತಿಂಗಳ ವೇತನದಲ್ಲಿ ಕಟಾವಣೆಗೊಳಿಸಲು ಆದೇಶಿಸಲಾಗಿತ್ತು. ಆದರೆ, ನವೆಂಬರ್-ಡಿಸೆಂಬರ್ 2019 ತಿಂಗಳುಗಳಲ್ಲಿ ವೇತನಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳು ಹಾಗೂ ಸಂಬಳನಿಧಿಯನ್ನು ಖಜಾನೆ-01 ಮತ್ತು ಖಜಾನೆ-02ಕ್ಕೆ ವರ್ಗಾಯಿಸುವ ಪ್ರಕ್ರಿಯೆಗಳು ನಡೆಯುತ್ತಿದ್ದರಿಂದ ಹಾಗೂ ಇನ್ನಿತರ ತಾಂತ್ರಿಕಕಾರಣಗಳಿಂದ ಡಿಸೆಂಬರ್ 2019ರ ತಿಂಗಳ ವೇತನ ದಿಂದ ಸಚಿವಾಲಯದ ನೌಕರರ ವಾರ್ಷಿಕ ಸದಸ್ಯತ್ವ ಶುಲ್ಕವನ್ನು ಕಟಾವಣೆಗೊಳಿಸಲಾಗಿರುವುದಿಲ್ಲವೆಂದು ತಿಳಿದುಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಡಿಸೆಂಬರ್ 2019ರ ವೇತನದಲ್ಲಿ ಕಡಿತಗೊಳಿಸಬೇಕಾಗಿದ್ದ ಸಂಘದ 2019ನೇ ಸಾಲಿನ ವಾರ್ಷಿಕವಂತಿಗೆಯನ್ನು 2020ರ ಫೆಬ್ರವರಿ ತಿಂಗಳ ವೇತನದಲ್ಲಿ ಕಟಾವಣೆಗೊಳಿಸಲುಕ್ರಮಕೈಗೊಳ್ಳುವುದು ಅವಶ್ಯವೆಂದುಪರಿಗಣಿಸಿ, ಸರ್ಕಾರವು ಈ ಕೆಳಕಂಡಂತೆಆದೇಶಿಸಿದೆ.

## ಆದೇಶ

**ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ,** ಡಿಸೆಂಬರ್ 2019ರ ತಿಂಗಳ ವೇತನದಲ್ಲಿ ಕಟಾವಣೆಗೊಳ್ಳಬೇಕಿದ್ದ2019ನೇ ಸಾಲಿನ ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘದ ವಾರ್ಷಿಕ ಸದಸ್ಯತ್ವ ಶುಲ್ಕ ರೂ.150/–ಅನ್ನು**2020ರ ಫೆಬ್ರವರಿ** ತಿಂಗಳ ವೇತನ ದಿಂದ ಕಡಿತಗೊಳಿಸಲು ಅನುಮತಿಸಲಾಗಿದೆ. ಈ ಸದಸ್ಯತ್ವ ಶುಲ್ಕವನ್ನು ನೀಡಲು ಸಂಘದ ಯಾವುದೇ ಸದಸ್ಯರು ಒಪ್ಪದಿದ್ದಲ್ಲಿ ಅವರು ತಮ್ಮ ವೇತನದಿಂದ ಸಂಘದ ಸದಸ್ಯತ್ವ ಶುಲ್ಕವನ್ನು ಕಡಿತಗೊಳಿಸಲು ತಮ್ಮ ಅಸಮ್ಮತಿಯನ್ನು ಸರ್ಕಾರದ ಅಧೀನ ಕಾರ್ಯದರ್ಶಿ,ಸಿ.ಆ.ಸು.ಇ(ಲೆಕ್ಕಪತ್ರ–I)ಇವರಿಗೆ **ದಿನಾಂಕ: 05.02.2020**ರ ಒಳಗಾಗಿ ಲಿಖಿತರೂಪದಲ್ಲಿ ತಿಳಿಸಬಹುದಾಗಿದೆ. ಮುಂಬರುವ ವರ್ಷಗಳಿಗೆ ಸಂಬಂಧಿಸಿದಂತೆ ದಿನಾಂಕ:14.11.2019ರ ಸರ್ಕಾರಿ ಆದೇಶದಲ್ಲಿನ ಷರತ್ತುಗಳೇ ಅನ್ವಯವಾಗುತ್ತವೆ.

ಕರ್ನಾಟಕರಾಜ್ಯಪಾಲರಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಗಾಯತ್ರಿಎಂ.ಆರ್)
ಸರ್ಕಾರದಅಧೀನಕಾರ್ಯದರ್ಶಿ,
ಸಿಬ್ಬಂದಿಮತ್ತುಆಡಳಿತಸುಧಾರಣೆಇಲಾಖೆ
(ಸೇವಾ ನಿಯಮಗಳು–೧)

PR-21

## ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 32 ಸೇಆನ್ಯಾ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ:21.12.2019.

## ಸುತ್ತೋಲೆ

**ವಿಷಯ:** ಕರ್ನಾಟಕ ಆಡಳಿತ ನ್ಯಾಯಮಂಡಳಿ ಹೆಸರನ್ನು(KAT) ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (KARNATAKA STATE ADMINISTRATIVE TRIBUNAL) ಎಂದು ಬದಲಾಯಿಸುವ ಬಗ್ಗೆ.

*****

ಭಾರತ ಸರ್ಕಾರದ Department of Personnel and Training ಇಲಾಖೆಯು ಅಧಿಸೂಚನೆ ಸಂಖ್ಯೆ:G.S.R.81(E).ದಿನಾಂಕ:15.01.2016ರಲ್ಲಿ Karnataka Administrative Tribunal ಹೆಸರನ್ನು Karnataka State Administrative Tribunalಎಂದು ಬದಲಾಯಿಸಿರುತ್ತದೆ. ಅದರಂತೆ ನ್ಯಾಯಮಂಡಳಿಯು ದಿನಾಂಕ:22.03.2016ರ ಸುತ್ತೋಲೆ ಸಂಖ್ಯೆ:KAT/EST(1)/CND-KSAT/23/2016ರಲ್ಲಿ ಈ ಸಂಬಂಧ ಒಂದು ಸುತ್ತೋಲೆಯನ್ನು ಕೂಡ ಹೊರಡಿಸಿರುತ್ತದೆ.

ಆದಾಗ್ಯೂ ರಾಜ್ಯ ಸರ್ಕಾರದ ಆಡಳಿತ ವ್ಯವಹಾರಗಳಲ್ಲಿ ಕರ್ನಾಟಕ ಆಡಳಿತ ನ್ಯಾಯಮಂಡಳಿ(KAT) ಎಂಬ ಪದವನ್ನೇ ಬಳಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದಕಾರಣ, ಸರ್ಕಾರದ ಎಲ್ಲಾ ಆಡಳಿತ ವ್ಯವಹಾರಗಳಲ್ಲಿ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ(Karnataka State Administrative Tribunal) ಎಂಬ ಪದವನ್ನೇ ಬಳಸುವಂತೆ ಎಲ್ಲಾ ಇಲಾಖೆಗಳಿಗೆ ಸೂಚಿಸಲಾಗಿದೆ.

**(ಚಂದ್ರಹಾಸ ಗಂ ತಾಳೂಕರ)**
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾನಿಯಮಗಳು-2)

PR-22

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಪೌರಾಡಳಿತ ಸೇವೆಯ ವಿವಿಧ ವೃಂದದ ನೌಕರರುಗಳನ್ನು ಪೌರಾಡಳಿತ ಸೇವೆಯ ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ-2 ವೃಂದದಲ್ಲಿ ವಿಲೀನಗೊಳಿಸುವ ಕುರಿತು - ಆದೇಶ.

**ಓದಲಾಗಿದೆ:-**
೧) ಸರ್ಕಾರದ ಆದೇಶ ಸಂಖ್ಯೆ:ನಅಇ 258 ಇಎಂಸಿ 1994, ದಿನಾಂಕ 9.12.1998.
೨) ಸರ್ಕಾರದ ಆದೇಶ ಸಂಖ್ಯೆ:ನಅಇ 34 ಇಎಂಸಿ 2005, ದಿನಾಂಕ 29.7.2005.
೩) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಇವರ ಪತ್ರಗಳ ಸಂಖ್ಯೆ:ಔಆಇ:ಡಿಎಂಎ:ಔಂ/ ಕೆಎಂಎಎಸ್/2014-15, ದಿನಾಂಕ 24.09.2019, 18.10.2019 ಮತ್ತು 22.11.2019.
೪) ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 02.12.2019ರಂದು ನಡೆದ ಸಭೆಯ ನಡವಳಿಗಳು.

**ಪ್ರಸ್ತಾವನೆ:-**

ಪೌರಾಡಳಿತ ಸೇವೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಐದು ್ಷಗಳ ಸೇವೆ ಸಲ್ಲಿಸಿದ ವಿವಿಧ ವೃಂದದ ನೌಕರರನ್ನು ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ-2 ವೃಂದಕ್ಕೆ ವಿಲೀನಗೊಳಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಪೌರ ಸೇವೆಯ ವಿವಿಧ ವೃಂದದ ನೌಕರರುಗಳನ್ನು ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ-2 ವೃಂದದಲ್ಲಿ ವಿಲೀನಗೊಳಿಸಲು ಮತ್ತು ಸದರಿ ವೃಂದದ ನೇರ ನೇಮಕಾತಿ ಹುದ್ದೆಗಳನ್ನು ತುಂಬಲು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಈ ಕೆಳಕಂಡಂತೆ ಅನುಪಾತವನ್ನು ನಿಗದಿಪಡಿಸಿ ಆದೇಶಿಸಲಾಗಿದೆ:-

| | | | | |
|---|---|---|---|---|
| I | | Direct Recruitment | | 33 1/3 |
| II | | By Absorption | | 66 2/3 |
| | 1 | Managers belongs to Municipal Service | 21.50% | |
| | 2 | Revenue Officers belongs to Municipal Service | 21.50% | |

| | | | | |
|---|---|---|---|---|
| | 3 | Senior Health Inspectors belongs to Municipal Service | 21.50% | |
| | 4 | Manager in the office of the Director of Municipal Administration | 2.16% | |

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರಗಳಲ್ಲಿ ಪ್ರಸ್ತುತ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ವಿವಿಧ ವೃಂದದಲ್ಲಿ ಐದು ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿರುವ ನೌಕರರುಗಳನ್ನು ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ–2 ವೃಂದದಲ್ಲಿ ವಿಲೀನಗೊಳಿಸುವ ಸಂಬಂಧ ಪ್ರಸ್ತುತ ರಾಜ್ಯ ಮೂಲ ವೃಂದದಲ್ಲಿ ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ–2 ವೃಂದದ 09 ಹುದ್ದೆಗಳು ಖಾಲಿ ಇದ್ದು, ಈ ಹುದ್ದೆಗಳಿಗೆ ಎದುರಾಗಿ ಪೌರ ಸೇವೆಯ ಅರ್ಹ ನೌಕರರುಗಳನ್ನು ವಿಲೀನಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸಲ್ಲಿಸಿರುವ ಪ್ರಸ್ತಾವನೆಯಂತೆ ಪೌರಾಡಳಿತ ಸೇವೆಯ ಮುಖ್ಯಾಧಿಕಾರಿ ಶ್ರೇಣಿ–2 ವೃಂದದಲ್ಲಿ ವಿಲೀನಗೊಳಿಸಲು ವಿವಿಧ ವೃಂದದ ನೌಕರರುಗಳಿಗೆ ಮೀಸಲಿರಿಸಿರುವ /ಲಭ್ಯವಿರುವ ಹುದ್ದೆಗಳು ಮತ್ತು ಅರ್ಹರಿರುವ ನೌಕರರುಗಳ ಮಾಹಿತಿ ಈ ಕೆಳಕಂಡಂತೆ ಇರುತ್ತದೆ;-

| ವೃಂದ | ಮಂಜೂರಾದ ಹುದ್ದೆಗಳ ಸಂಖ್ಯೆ | ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ | ನಿಗಧಿತ ಅನುಪಾತ ದಂತೆ ವಿಲೀನಾತಿಗೆ ಲಭ್ಯವಾಗುವ ಹುದ್ದೆಗಳ ಸಂಖ್ಯೆ |
|---|---|---|---|
| ಕಛೇರಿ ವ್ಯವಸ್ಥಾಪಕರು | 25 | 21 | 04 |
| ಕಂದಾಯಾಧಿಕಾರಿ | 25 | 24 | 01 |
| ಹಿರಿಯ ಆರೋಗ್ಯ ನಿರೀಕ್ಷಕರು | 25 | 21 | 04 |
| ಒಟ್ಟು | 75 | 66 | 09 |

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪ್ರಸ್ತಾವನೆಯಲ್ಲಿ ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ–2 ವೃಂದಕ್ಕೆ ವಿಲೀನಗೊಳಿಸಲು ಕೋರಿರುವ ಅರ್ಹ ನೌಕರರ ವಿವರಗಳು ಈ ಕೆಳಕಂಡಂತಿವೆ:

**1) ಕಛೇರಿ ವ್ಯವಸ್ಥಾಪಕರ ವೃಂದದ ನೌಕರರವಿವರ:**

| ಕ್ರಮ ಸಂಖ್ಯೆ | ನೌಕರರ ಹೆಸರು | ಕಛೇರಿ ವ್ಯವಸ್ಥಾಪಕರ ಹುದ್ದೆಗೆ ನೇಮಕವಾದ ದಿನಾಂಕ | ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ |
|---|---|---|---|
| 1. | ಶ್ರೀ ರಾಯಪ್ಪ | 11.08.2009 | 252 |
| 2. | ಶ್ರೀ ಎಲ್.ಚಂದ್ರಶೇಖರ್ | 11.08.2009 | 254 |
| 3. | ಶ್ರೀ ಜಗದೀಶ್ ಆರ್.ನಾಯ್ಕ | 13.10.2009 | 261 |

| | | | |
|---|---|---|---|
| 4. | ಶ್ರೀ ಪಿ.ಎಂ.ಚನ್ನಪ್ಪನವರ್ | 13.10.2009 | 263 |

**2)** ಕಂದಾಯಾಧಿಕಾರಿ ವೃಂದದ ನೌಕರರ ವಿವರ:

| ಕ್ರಮ ಸಂಖ್ಯೆ | ನೌಕರರ ಹೆಸರು | ಕಂದಾಯಾಧಿಕಾರಿ ಹುದ್ದೆಗೆ ನೇಮಕವಾದ ದಿನಾಂಕ | ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ |
|---|---|---|---|
| 1. | ಶ್ರೀ ಎ.ಹೆಚ್.ನಾಗರಾಜ | 04.12.2012 | 208 |

**3)** ಹಿರಿಯ ಆರೋಗ್ಯ ನಿರೀಕ್ಷಕರ ವೃಂದದ ನೌಕರರ ವಿವರ:

| ಕ್ರಮ ಸಂಖ್ಯೆ | ನೌಕರರ ಹೆಸರು | ಹಿರಿಯ ಆರೋಗ್ಯ ನಿರೀಕ್ಷಕರ ಹುದ್ದೆಗೆ ನೇಮಕವಾದ ದಿನಾಂಕ | ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ |
|---|---|---|---|
| 1. | ಶ್ರೀ ಆರ್.ಡಿ.ಗೋಂದಕರ್ | 09.02.2005 | 215 |
| 2. | ಶ್ರೀ ಹೆಚ್.ಆರ್.ರಮೇಶ್ | 20.04.2011 | 232 |
| 3. | ಶ್ರೀ ಕೆ.ಬಿ.ತೀರ್ಥಪ್ರಸಾದ್ | 22.10.2011 | 253 |
| 4. | ಶ್ರೀ ರವಿಶಿರಗುಪ್ಪಿ | 22.10.2011 | 254 |

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಪ್ರಸ್ತಾವನೆಯನ್ನು ಆಧರಿಸಿ ನೌಕರರ ಸೇವಾ ವಿವರಗಳು ಹಾಗೂ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ, ಮೇಲ್ಕಂಡ 9 (ಒಂಬತ್ತು) ಅರ್ಹ ನೌಕರರುಗಳನ್ನು ಕೆ.ಎಂ.ಎ.ಎಸ್. ಮುಖ್ಯಾಧಿಕಾರಿ ಶ್ರೇಣಿ-೨ ವೃಂದಕ್ಕೆ ವಿಲೀನಗೊಳಿಸುವ ಬಗ್ಗೆ ದಿನಾಂಕ 02.12.2019ರಂದು ನಡೆದ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪರಿಶೀಲನಾ ಸಭೆಯ ನಡವಳಿಗಳಲ್ಲಿ ತೀರ್ಮಾನಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ನಅಇ 80 ಇಎಂಸಿ 2018 ಭಾಗ-6,**

**ಬೆಂಗಳೂರು, ದಿನಾಂಕ 20.01.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ 365(1)(2)(ಎ)ರನ್ವಯ ಪೌರ ಸೇವೆಯ ಕೆಳಕಂಡ ವಿವಿಧ ವೃಂದಗಳ 09(ಒಂಬತ್ತು) ನೌಕರರನ್ನು ತಕ್ಷಣದಿಂದ ಜಾರಿಗೆ ಬರುವಂತೆ, ಕರ್ನಾಟಕ ಪೌರಾಡಳಿತ ಸೇವೆಯ ವೃಂದದ ಅಧಿಕಾರಿಗಳೆಂದು ಪರಿಗಣಿಸಿ, ವೇತನ ಶ್ರೇಣಿ ರೂ.33450-62600ರ ಮುಖ್ಯಾಧಿಕಾರಿ ಶ್ರೇಣಿ-2ರ ಹುದ್ದೆಯಲ್ಲಿ ಸ್ಥಾನಪನ್ನ ಆಧಾರದ ಮೇಲೆ ಅವರು ಪ್ರಸ್ತುತ ಹೊಂದಿರುವ ಹುದ್ದೆಯಲ್ಲಿ ಪಡೆಯುತ್ತಿರುವಂತೆ ವೇತನದ ರಕ್ಷಣೆ ನೀಡಿ, ನಿಯಮಾನುಸಾರ ಸೇವಾ ಸೌಲಭ್ಯಗಳೊಂದಿಗೆ ವಿಲೀನಗೊಳಿಸಿ ಆದೇಶಿಸಿದೆ. ಹಾಗೂ

ಕೆಎಂಎಎಸ್ ಅಧಿಕಾರಿಗಳಿಗೆ ಅನ್ವಯವಾಗುವ ಸೇವಾ ನಿಯಮಾವಳಿಗೊಳಪಟ್ಟು ಮತ್ತು ಈ ಆದೇಶದಲ್ಲಿ ವಿಧಿಸಿರುವ ಷರತ್ತಿಗೆ ಒಳಪಟ್ಟು ಅವರುಗಳನ್ನು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮುಂದುವರೆಸಿ ಆದೇಶಿಸಿದೆ.

**ಪೌರಾಡಳಿತ ಕೆ.ಎಂ.ಎ.ಎಸ್. ಮುಖ್ಯಾಧಿಕಾರಿಗಳು ಶ್ರೇಣಿ–2 ವೃಂದಕ್ಕೆ ವಿಲೀನಗೊಳಿಸಿರುವ ನೌಕರರ ವಿವರಗಳು:–**

| ಕ್ರ ಸಂ | ನೌಕರರ ಹೆಸರು | 2019ಕ್ಕೆ ಇರುವಂತೆ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ | ವೃಂದ ವಿಭಾಗ |
|---|---|---|---|
| ೧. | ಶ್ರೀ ರಾಯಪ್ಪ | 252 | ಕಛೇರಿ ವ್ಯವಸ್ಥಾಪಕ ವೃಂದ |
| ೨. | ಶ್ರೀ ಎಲ್.ಚಂದ್ರಶೇಖರ್ | 254 | |
| ೩. | ಶ್ರೀ ಜಗದೀಶ್ ಆರ್.ನಾಯ್ಕ | 261 | |
| ೪. | ಶ್ರೀ ಪಿ.ಎಂ.ಚನ್ನಪ್ಪನವರ್ | 263 | |
| ೫. | ಶ್ರೀ ಎ.ಹೆಚ್.ನಾಗರಾಜ | 208 | ಕಂದಾಯಾಧಿಕಾರಿ ವೃಂದ |
| ೬. | ಶ್ರೀ ಆರ್.ಡಿ.ಗೋಂದಕರ್ | 215 | ಹಿರಿಯ ಆರೋಗ್ಯ ನಿರೀಕ್ಷಕ ವೃಂದ |
| ೭. | ಶ್ರೀ ಹೆಚ್.ಆರ್.ರಮೇಶ್ | 232 | |
| ೮. | ಶ್ರೀ ಕೆ.ಬಿ.ತೀರ್ಥಪ್ರಸಾದ್ | 253 | |
| ೯. | ಶ್ರೀ ರವಿಶಿರಗುಪ್ಪಿ | 254 | |

**ಷರತ್ತುಗಳು:**

೧) ಈ ಮೇಲ್ಕಂಡ ನೌಕರರುಗಳು ಸರ್ಕಾರದ ಆದೇಶ ಸಂಖ್ಯೆ:ನ ಅ ಇ 258 ಇಎಂಸಿ 94, ದಿನಾಂಕ 09.12.1998 ರಲ್ಲಿ ತಿಳಿಸಿರುವಂತೆ ಮುಖ್ಯಾಧಿಕಾರಿ ಶ್ರೇಣಿ–2 ಹುದ್ದೆಗೆ ನಿಗದಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ಮುಖ್ಯಾಧಿಕಾರಿ ಶ್ರೇಣಿ–2 ಹುದ್ದೆಯಲ್ಲಿ ವಿಲೀನಗೊಳಿಸಿದ / ಈ ಆದೇಶ ಹೊರಡಿಸಿದ ದಿನಾಂಕದಿಂದ ಎರಡು ವರ್ಷದೊಳಗಾಗಿ ಉತ್ತೀರ್ಣರಾಗತಕ್ಕದ್ದು.

೨) ಮೇಲ್ಕಂಡ ಒಟ್ಟು ಮೂರು ವೃಂದಗಳಲ್ಲಿ ವಿಲೀನಗೊಂಡಿರುವ ನೌಕರರುಗಳ ವಿರುದ್ಧ ಅಧೀನ ಕಛೇರಿಗಳಲ್ಲಿ ದಿನಾಂಕ: 02.12.2019ರ ಅವಧಿಯೊಳಗೆ ಯಾವುದಾದರೂ ಇಲಾಖಾ ವಿಚಾರಣೆ ಹೂಡಿರುವುದು ಕಂಡು ಬಂದಲ್ಲಿ ಸದರಿಯವರ ವಿಲೀನಾತಿಯನ್ನು ರದ್ದುಗೊಳಿಸಲಾಗುವುದು ಅಥವಾ ಹಿಂಪಡೆಯಲಾಗುವುದು.

೩) ಈ ಆದೇಶದಲ್ಲಿ ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ–2 ವೃಂದಕ್ಕೆ ವಿಲೀನಗೊಳಿಸಿರುವ ನೌಕರರುಗಳಿಗೆ ರಾಜ್ಯದ ಪಟ್ಟಣ ಪಂಚಾಯತಿ/ಪುರಸಭೆಗಳಲ್ಲಿ ಮುಖ್ಯಾಧಿಕಾರಿ ಹುದ್ದೆಗಳಿಗೆ ನೇಮಕಗೊಳಿಸುವ ಸಂದರ್ಭದಲ್ಲಿ ಸರ್ಕಾರದೊಂದಿಗೆ ಸಮಾಲೋಚಿಸತಕ್ಕದ್ದು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ವಿಜಯಕುಮಾರ್)

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

PR-23

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಜಲಸಂಪನ್ಮೂಲ ಇಲಾಖೆಯ ಸಹಾಯಕ ಅಭಿಯಂತರರು (ಸಿವಿಲ್ ಮತ್ತು ಮೆಕ್ಯಾನಿಕಲ್) ಇವರನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು ವೃಂದಕ್ಕೆ ಬಡ್ತಿಗಾಗಿ ಸಹಾಯಕ ಅಭಿಯಂತರರು (ಸಿವಿಲ್) ಮತ್ತು ಸಹಾಯಕ ಅಭಿಯಂತರರು (ಮೆಕ್ಯಾನಿಕಲ್) ವೃಂದದಿಂದ 10 : 1 ರ ಅನುಪಾತದಲ್ಲಿ ಬಡ್ತಿ ನೀಡುವ ಬಗ್ಗೆ ಕಾರ್ಯಕಾರಿ ಆದೇಶ.

**ಓದಲಾಗಿದೆ**
1) ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 293 ಸೇಸಕಿ 2005, ದಿನಾಂಕ 03.12.2014.

2) ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 104 ಸೇಸಕಿ 2016, ದಿನಾಂಕ: 28.11.2017.

3) ಜಲಸಂಪನ್ಮೂಲ ಇಲಾಖೆಯ 2009ರ ನಂತರ ನೇಮಕಗೊಂಡ ಸಹಾಯಕ ಅಭಿಯಂತರರ ಮನವಿ ದಿನಾಂಕ: 21.11.2019.

4) ಸರ್ಕಾರದ ಆದೇಶ ಸಂಖ್ಯೆ: ಜಸಂಇ 06 ಸೇಎಸು 2015, ದಿನಾಂಕ 25.11.2019.

**********

**ಪ್ರಸ್ತಾವನೆ :**

ಮೇಲೆ (1)ರಲ್ಲಿ ಓದಲಾದ ದಿನಾಂಕ:03.12.2014ರ ಸರ್ಕಾರದ ಅಧಿಸೂಚನೆಯಲ್ಲಿ ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಂತಿಮಗೊಳಿಸಿ ದಿನಾಂಕ: 11.12.2014ರಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

2. ಮೇಲೆ (2) ರಲ್ಲಿ ಓದಲಾದ ದಿನಾಂಕ: 28–11–2017ರ ಸರ್ಕಾರದ ಅಧಿಸೂಚನೆಯಲ್ಲಿ ಜಲಸಂಪನ್ಮೂಲ ಇಲಾಖೆಯಲ್ಲಿ 2009ರ ನಂತರ ನೇಮಕಗೊಂಡ ಸಹಾಯಕ ಅಭಿಯಂತರರ (ಸಿವಿಲ್ ಹಾಗೂ ಮೆಕ್ಯಾನಿಕಲ್) ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯಿಂದ ಜಲ ಸಂಪನ್ಮೂಲ ಇಲಾಖೆಯು ಬೇರ್ಪಡೆಗೊಂಡ ನಂತರ ಆಯ್ಕೆ ಮೂಲಕ ಬರುವ ಸಹಾಯಕ ಇಂಜಿನಿಯರ್‌ಗಳಿಗೆ ಅಂತರ್ ಜ್ಯೇಷ್ಠತೆ (Interse Seniority) ನಿಗಧಿ ಪಡಿಸುವ ಹಾಗೂ ಸಹಾಯಕ ಇಂಜಿನಿಯರ್ ವೃಂದದ ಜ್ಯೇಷ್ಠತೆಗೆ ಸಂಬಂಧಿಸಿದಂತೆ, ಕರ್ನಾಟಕ ಆಡಳಿತ ನ್ಯಾಯ ಮಂಡಳಿ / ನ್ಯಾಯಾಲಯದ ಮುಂದೆ ಯಾವುದೇ ಪ್ರಕರಣಗಳು ಬಾಕಿ ಇದ್ದಲ್ಲಿ ಅಂತಹ ಪ್ರಕರಣಗಳಲ್ಲಿ ನ್ಯಾಯ ಮಂಡಳಿ / ನ್ಯಾಯಾಲಯವು ನೀಡುವ ಅಂತಿಮ ತೀರ್ಪಿನ ಮೇರೆಗೆ ಪರಿಷ್ಕರಿಸುವ ಷರತ್ತಿಗೆ ಒಳಪಟ್ಟು ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಇದು ದಿನಾಂಕ: 26.07.2018ರಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.

3. ಮೇಲೆ (3) ರಲ್ಲಿ ಓದಲಾದ ದಿನಾಂಕ: 21.11.2019 ರಲ್ಲಿ ಜಲಸಂಪನ್ಮೂಲ ಇಲಾಖೆಯಲ್ಲಿ 2009ರ ನಂತರ ನೇಮಕಗೊಂಡ ಸಹಾಯಕ ಅಭಿಯಂತರರು (ಸಿವಿಲ್) ಸರ್ಕಾರಕ್ಕೆ ಮನವಿ ಸಲ್ಲಿಸಿ ಸರ್ಕಾರವು ದಿನಾಂಕ: 28.11.2017ರಲ್ಲಿ ಸಹಾಯಕ ಅಭಿಯಂತರರ (ಸಿವಿಲ್/ಮೆಕ್ಯಾನಿಕಲ್) ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದ್ದು, ಸದರಿ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿ ಮುಂಬಡ್ತಿ ನೀಡುವಂತೆ ಕೋರಿರುತ್ತಾರೆ.

4. ಮುಖ್ಯ ಇಂಜಿನಿಯರ್, ಜ.ಸಂ.ಅ.ಸಂಸ್ಥೆ ಇವರು ದಿನಾಂಕ:30.05.2008ರ ಪತ್ರದ ಅನ್ವಯ ಜಲಸಂಪನ್ಮೂಲ ಇಲಾಖೆಯಲ್ಲಿ ಸಹಾಯಕ ಅಭಿಯಂತರರು, ಮೆಕ್ಯಾನಿಕಲ್ ಎಂಬ ಹುದ್ದೆ ಪ್ರತ್ಯೇಕವಾಗಿ ಇರುವುದಿಲ್ಲವೆಂದೂ ಹೈಡ್ರಾಲಜಿ ಮತ್ತು ಕೇಂದ್ರ ಯಾಂತ್ರಿಕ ಸಂಸ್ಥೆಗೆ ಮಂಜೂರಾಗಿರುವ ಸಹಾಯಕ ಇಂಜಿನಿಯರ್ (ಮೆಕ್ಯಾನಿಕಲ್) ಹುದ್ದೆಗಳಿಗೆ ಆಯ್ಕೆಯಾಗಿರುವ ಸಹಾಯಕ ಇಂಜಿನಿಯರ್ (ಮೆಕ್ಯಾನಿಕಲ್) ರವರನ್ನು ನಿಯೋಜಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

5. ಜಲ ಸಂಪನ್ಮೂಲ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಅಭಿಯಂತರರು ಹುದ್ದೆಗೆ ನೇಮಕಾತಿಗಾಗಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಕಳುಹಿಸಲಾದ ಸರ್ಕಾರದ ಪತ್ರ ಸಂಖ್ಯೆ ಜಸಂಇ 94 ಸೇಸಕಿ 2006, ದಿನಾಂಕ: 15.06.2007 ಮತ್ತು ದಿನಾಂಕ: 05.02.2008ರಲ್ಲಿ ಶೇಕಡ 90 ರಷ್ಟು ಹುದ್ದೆಗಳನ್ನು ಬಿ.ಇ. ಸಿವಿಲ್ ಪದವಿ ಪಡೆದ ಅಭ್ಯರ್ಥಿಗಳಿಂದಲೂ ಹಾಗೂ ಶೇಕಡ 10 ರಷ್ಟು ಅಭ್ಯರ್ಥಿಗಳನ್ನು ಬಿ.ಇ. (ಮೆಕ್ಯಾನಿಕಲ್) ಪದವಿ ಪಡೆದ ಅಭ್ಯರ್ಥಿಗಳಿಂದಲೂ ನೇಮಕ ಮಾಡುವಂತೆ ಹಾಗೂ ಇದೇ ಅನುಪಾತದಲ್ಲಿ ಕಿರಿಯ ಇಂಜಿನಿಯರ್‌ಗಳನ್ನೂ ಸಹ ನೇಮಕಾತಿ ಮಾಡುವಂತೆ ಕೋರಲಾಗಿತ್ತು. ಅದರನ್ವಯ ಕರ್ನಾಟಕ ಲೋಕಸೇವಾ ಆಯೋಗವು ಅಧಿಸೂಚನೆ ಸಂಖ್ಯೆ ಪಿಎಸ್‌ಐ 16 ಆರ್‌ಟಿಬಿ 2007, ದಿನಾಂಕ: 16.10.2008 ರಲ್ಲಿ 658 ಸಹಾಯಕ ಇಂಜಿನಿಯರ್ (ಸಿವಿಲ್) ಹಾಗೂ 72 ಸಹಾಯಕ ಇಂಜಿನಿಯರ್ (ಮೆಕ್ಯಾನಿಕಲ್) ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಪ್ರತ್ಯೇಕವಾಗಿ ಪ್ರಕಟಿಸಿ ಸರ್ಕಾರಕ್ಕೆ ಕಳುಹಿಸಿತ್ತು.

6. ಮೇಲೆ (4) ರಲ್ಲಿ ಓದಲಾದ ದಿನಾಂಕ 25.11.2019ರ ಸರ್ಕಾರದ ಆದೇಶದಲ್ಲಿ ದಿನಾಂಕ: 02/08/2018ರಂದು ನಡೆದ ಸಚಿವ ಸಂಪುಟ ಸಭೆಯು ತೆಗೆದುಕೊಂಡ ನಿರ್ಣಯದಂತೆ ಜಲಸಂಪನ್ಮೂಲ ಇಲಾಖೆಯಲ್ಲಿ ನಿಯೋಜನೆ/ವರ್ಗಾವಣೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಲೋಕೋಪಯೋಗಿ ಇಲಾಖೆ ಹಾಗೂ ಇತರೆ ಇಲಾಖೆಗಳಿಂದ ನೇಮಕಗೊಂಡಿರುವ ಅಧಿಕಾರಿ/ನೌಕರರ ಸೇವೆಯನ್ನು ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವರ್ಗಾವಣೆ ಮೂಲಕ ನೇಮಿಸಿಕೊಳ್ಳಲು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 16(ಎ)(ii) ರನ್ವಯ ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ಶಾಶ್ವತ ವರ್ಗಾವಣೆ ಮುಖೇನ ಒಂದು ಬಾರಿಗೆ ಮಾತ್ರ ಅಭಿಮತ ಸಲ್ಲಿಸಲು ಆದೇಶ ಹೊರಡಿಸಲಾಗಿದೆ.

7. ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬೃಹತ್ ಮತ್ತು ಸಣ್ಣ ಕಾಮಗಾರಿಗಳು ಪ್ರಮುಖವಾಗಿ ಸಿವಿಲ್ ವಿಷಯಕ್ಕೆ ಸಂಬಂಧಪಟ್ಟ ಕಾಮಗಾರಿಗಳಾಗಿದ್ದು, ಸಿವಿಲ್‌ನಲ್ಲಿ ಪದವಿ ಪಡೆದ ಹಾಗೂ ಅನುಭವ ಇರುವ ಅಧಿಕಾರಿಯ ಸೇವೆ ಅತ್ಯಗತ್ಯವಾಗಿರುತ್ತದೆ ಹಾಗೂ ಪ್ರಸ್ತುತ ಇರುವ ಜೇಷ್ಠತಾ ಪಟ್ಟಿಯನ್ವಯ ಬಿ.ಇ. (ಮೆಕ್ಯಾನಿಕಲ್) ಪದವಿ ಪಡೆದ ಅಭಿಯಂತರರುಗಳಿಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಬಡ್ತಿ ನೀಡಿದಲ್ಲಿ ಮುಂದಿನ ದಿನಗಳಲ್ಲಿ ಮೆಕ್ಯಾನಿಕಲ್ ಪದವಿ ಪಡೆದ ಅಭಿಯಂತರರೇ ಕಾರ್ಯಪಾಲಕ ಅಭಿಯಂತರರು, ಅಧೀಕ್ಷಕ ಅಭಿಯಂತತರು ಹಾಗೂ ಮುಖ್ಯ ಅಭಿಯಂತರರಾಗಿ ಬಡ್ತಿ ಹೊಂದಲಿದ್ದು, ಸದರಿ ಅಭಿಯಂತರರು ಸಿವಿಲ್ ವಿಷಯದಲ್ಲಿ ಅನುಭವ ಇಲ್ಲದಿದ್ದಲ್ಲಿ ಆಡಳಿತ ಹಿತದೃಷ್ಟಿಯಿಂದ ಕಾಮಗಾರಿಗಳ ಗುಣಮಟ್ಟದಲ್ಲಿ ಕಾರ್ಯಸಾಧ್ಯ ಮಾಡಲು ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ ಸಹಾಯಕ ಅಭಿಯಂತರರು (ಸಿವಿಲ್) ಮತ್ತು ಸಹಾಯಕ ಅಭಿಯಂತರರು (ಮೆಕ್ಯಾನಿಕಲ್) ಇವರಿಗೆ 10:1ರ ಅನುಪಾತದಲ್ಲಿ (10:1 Ratio) ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಬಡ್ತಿ ನೀಡುವುದು ಸೂಕ್ತವಾಗಿರುತ್ತದೆ.

8. ಜಲಸಂಪನ್ಮೂಲ ಇಲಾಖೆಯಲ್ಲಿ ಬರುವ ಎಲ್ಲಾ ಬೃಹತ್, ಮಧ್ಯಮ ಮತ್ತು ಸಣ್ಣ ಕಾಮಗಾರಿಗಳು ಮುಖ್ಯವಾಗಿ ಸಿವಿಲ್ ಅಭಿಯಂತರರು ನಿರ್ವಹಿಸಬೇಕಾಗಿರುತ್ತದೆ. ಮೆಕ್ಯಾನಿಕಲ್ ಇಂಜಿನಿಯರ್ ರವರು ಕೇಂದ್ರ ಯಾಂತ್ರಿಕ ಸಂಸ್ಥೆ, ಗೇಜಿಂಗ್ ಘಟಕ, ಡ್ಯಾಂಗಳ ಗೇಟ್ ಹಾಗೂ ಇತರ ಯಾಂತ್ರಿಕ ನಿರ್ವಹಣೆಗಳನ್ನು ಮಾತ್ರ ನಿರ್ವಹಿಸಬೇಕಾಗಿರುತ್ತದೆ. ಆಡಳಿತದ ಹಿತದೃಷ್ಟಿಯಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ತರಲು ಹೆಚ್ಚಿನ ಕಾಲಾವಕಾಶ ಬೇಕಾಗಿದ್ದು ತಿದ್ದುಪಡಿ ತರುವ ಷರತ್ತಿಗೊಳಪಟ್ಟು ಕಾರ್ಯಕಾರಿ ಆದೇಶ ಹೊರಡಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಕೆಳಕಂಡ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ ಜಸಂಇ 208 ಸೇಎಸು 2019 ಬೆಂಗಳೂರು, ದಿನಾಂಕ: 04.12.2019</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿಗಳಿಗೆ ತಿದ್ದುಪಡಿ ತರುವ ಷರತ್ತಿಗೆ ಒಳಪಟ್ಟು, ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದನ್ವಯ ಅಧಿಸೂಚನೆ ಸಂಖ್ಯೆ ಜಸಂಇ 104 ಸೇಸಕಿ 2016, ದಿನಾಂಕ: 28/11/2017ರಲ್ಲಿ ಪ್ರಕಟವಾಗಿರುವ ಸಹಾಯಕ ಅಭಿಯಂತರರ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಆಧಾರವಾಗಿರಿಸಿಕೊಂಡು ಸಹಾಯಕ ಇಂಜಿನಿಯರ್ (ಸಿವಿಲ್) ಹಾಗೂ ಸಹಾಯಕ ಅಭಿಯಂತರರು (ಮೆಕ್ಯಾನಿಕಲ್) ಇವರ ಜೇಷ್ಠತೆಗೆ ಅನುಗುಣವಾಗಿ working list ಅನ್ನು ಸಿದ್ಧಪಡಿಸಿ, ಸಹಾಯಕ ಅಭಿಯಂತರರು (ಸಿವಿಲ್) ಮತ್ತು ಸಹಾಯಕ ಅಭಿಯಂತರರು (ಮೆಕ್ಯಾನಿಕಲ್) ಇವರಿಗೆ ಕ್ರಮವಾಗಿ 10:1 ರ ಅನುಪಾತದಲ್ಲಿ (10:1 Ratio) ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ಬಡ್ತಿ ನೀಡಲು ಕಾರ್ಯಕಾರಿ ಆದೇಶವನ್ನು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

**(ಕೆ. ಎಲ್. ಪ್ರಸಾದ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸೇವೆಗಳು–ಎ).

PR-24

## ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 06 ಸೇಎಸು 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 05/12/2019.

### ತಿದ್ದುಪಡಿ

ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 06 ಸೇಎಸು 2015 ಬೆಂಗಳೂರು, ದಿನಾಂಕ: 25.11.2019ರ ಅನುಬಂಧದ ಕ್ರಮಸಂಖ್ಯೆ: 3ರ ಉಪಸಂಖ್ಯೆ (iv) ರಲ್ಲಿ **"ಜಲಸಂಪನ್ಮೂಲ ಇಲಾಖೆಯಲ್ಲಿ 2009 ಹಾಗೂ ತದನಂತರ ಸಾಲಿನಲ್ಲಿ ಸಹಾಯಕ/ ಕಿರಿಯ ಅಭಿಯಂತರರ ಹುದ್ದೆಗೆ ನೇಮಕಗೊಂಡ ಅಧಿಕಾರಿ/ನೌಕರರು ಕಡ್ಡಾಯವಾಗಿ ತಮ್ಮ ಅಭಿಮತ / ಇಚ್ಛಾಪತ್ರವನ್ನು ಜಾಲತಾಣ www.waterresources.kar.nic.in/ transferbyappointment.html ದಲ್ಲಿ ಲಭ್ಯವಿರುವ (FORM OF OPTION-3 : WILLINGNESS) ನಮೂನೆಯಲ್ಲಿ ತಮ್ಮ ಪೂರ್ಣ ವಿವರವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ Online form-3 ಅರ್ಜಿಯನ್ನು ಕಡ್ಡಾಯವಾಗಿ Online ದ್ವಿಭಾಷೆ (ಕನ್ನಡ ಮತ್ತು ಇಂಗ್ಲೀಷ್)ಯಲ್ಲಿ ಭರ್ತಿ ಮಾಡಿಕೊಂಡು ಸಲ್ಲಿಸತಕ್ಕದ್ದು"** ಎಂಬ ಪದಗಳಿಗೆ ಬದಲಾಗಿ **"ಜಲಸಂಪನ್ಮೂಲ ಇಲಾಖೆಯಲ್ಲಿ 2009 ಹಾಗೂ ತದನಂತರ ಸಾಲಿನಲ್ಲಿ ಸಹಾಯಕ/ ಕಿರಿಯ ಅಭಿಯಂತರರ ಹುದ್ದೆಗೆ ನೇಮಕಗೊಂಡ ಅಧಿಕಾರಿ/ನೌಕರರು ಕಡ್ಡಾಯವಾಗಿ ಜಾಲತಾಣ www.waterresources.kar.nic.in / transferbyappointment.html ದಲ್ಲಿ ಲಭ್ಯವಿರುವ ನಮೂನೆ 3ರಲ್ಲಿ (FORM-3) ತಮ್ಮ ಪೂರ್ಣ ವಿವರವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ Online form-3 ಅರ್ಜಿಯನ್ನು ಕಡ್ಡಾಯವಾಗಿ Online ದ್ವಿಭಾಷೆ (ಕನ್ನಡ ಮತ್ತು ಇಂಗ್ಲೀಷ್)ನಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು"**

ಎಂದು ತಿದ್ದಿ ಓದಿಕೊಳ್ಳತಕ್ಕದ್ದು. ಉಳಿದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 06 ಸೇಎಸು 2015 ಬೆಂಗಳೂರು, ದಿನಾಂಕ: 25.11.2019ರ ಅನುಬಂಧದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ರಾಕೇಶ್ ಸಿಂಗ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ.

PR-25

## ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 06 ಸೇಎಸು 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 05/12/2019.

**ಸೇರ್ಪಡೆ**

ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 06 ಸೇಎಸು 2015 ಬೆಂಗಳೂರು, ದಿನಾಂಕ: 25.11.2019ರ ಅನುಬಂಧದ ಕ್ರಮಸಂಖ್ಯೆ: 3ರ ಉಪಸಂಖ್ಯೆ (v) ರ ನಂತರ (vi) ನ್ನು ಈ ಕೆಳಕಂಡ ಸೇರ್ಪಡೆ ಮಾಡತಕ್ಕದ್ದು.

(vi) *"2003ರ ನಂತರ ಲೋಕೋಪಯೋಗಿ ಇಲಾಖೆಯಿಂದ ನೇಮಕಾತಿ ಹೊಂದಿರುವಂತಹ ಅಭಿಯಂತರರು/ ಅಧಿಕಾರಿಗಳು /ನೌಕರರು ಜಲಸಂಪನ್ಮೂಲ ಇಲಾಖೆಯಲ್ಲಿ ವಿಲೀನಾತಿ/ ವರ್ಗಾವಣೆ ಮೂಲಕ (appointment by transfer) ನೇಮಕಾತಿ ಹೊಂದಲು ತಮ್ಮ ಅಭಿಮತ/ ಇಚ್ಛಾಪತ್ರವನ್ನು ಸಲ್ಲಿಸಲು ಅರ್ಹರಿರುವುದಿಲ್ಲ".*

ಉಳಿದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 06 ಸೇಎಸು 2015 ಬೆಂಗಳೂರು, ದಿನಾಂಕ: 25.11.2019ರ ಅಧಿಸೂಚನೆಯಲ್ಲಿ ಹಾಗೂ ದಿನಾಂಕ: 05.12.2019ರ ತಿದ್ದುಪಡಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ರಾಕೇಶ್ ಸಿಂಗ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ.

PR-26

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಹುದ್ದೆಗಳಿಗೆ ಮುಂಬಡ್ತಿಗೆ ಸಂಬಂಧಿಸಿದಂತೆ ಇಲಾಖಾ ಮುಂಬಡ್ತಿ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 293 ಸೇಸಕಿ 2005, ದಿನಾಂಕ: 03.12.2014.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 75 ಸೆನೆನಿ 2010, ದಿನಾಂಕ: 19.05.2010.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 18 ಸೆನೆನಿ 2011, ದಿನಾಂಕ: 29.08.2011.

*******

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ದಿನಾಂಕ:03.12.2014ರ ಸರ್ಕಾರದ ಅಧಿಸೂಚನೆಯಲ್ಲಿ ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಂತಿಮಗೊಳಿಸಿ ದಿನಾಂಕ: 11.12.2014ರಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

2. ಮೇಲೆ (2)ರಲ್ಲಿ ಓದಲಾದ ದಿನಾಂಕ:19.05.2010ರ ಆದೇಶದಲ್ಲಿ ಆಡಳಿತ ಇಲಾಖೆಗಳು ಮುಂಬಡ್ತಿಗೆ ಸಂಬಂಧಿಸಿದಂತೆ ಜ್ಯೇಷ್ಠತೆ ಹಾಗೂ ಅರ್ಹತೆಯ ಆಧಾರದ ಮೇಲೆ ರಾಜ್ಯ ಸಿವಿಲ್ ಸೇವಾ ಹುದ್ದೆಗಳಿಗೆ ಮುಂಬಡ್ತಿಯನ್ನು ಪರಿಗಣಿಸುವಾಗ ಇಲಾಖಾ ಮುಂಬಡ್ತಿ ಸಮಿತಿಯನ್ನು ರಚಿಸುವ ಬಗ್ಗೆ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ.

3. ಮೇಲೆ (3)ರಲ್ಲಿ ಓದಲಾದ ದಿನಾಂಕ:29.08.2011ರ ಆದೇಶದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ರಾಜ್ಯ ಸಿವಿಲ್ ಸೇವೆಯಲ್ಲಿನ ಹುದ್ದೆಗಳಿಗೆ ಮುಂಬಡ್ತಿ ನೀಡುವ ಕುರಿತಂತೆ ರಚಿಸಲಾದ ಇಲಾಖಾ ಮುಂಬಡ್ತಿ ಸಮಿತಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಅಧಿಕಾರಿಯನ್ನು ಸದಸ್ಯರನ್ನಾಗಿ ನೇಮಕ ಮಾಡುವಂತೆ ತಿಳಿಸಲಾಗಿದೆ.

4. ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಹುದ್ದೆಗಳಿಗೆ ಮುಂಬಡ್ತಿಗೆ ಪರಿಗಣಿಸುವ ಸಲುವಾಗಿ ಇಲಾಖಾ ಮುಂಬಡ್ತಿ ಸಮಿತಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಮೇಲೆ ಕ್ರಮ ಸಂಖ್ಯೆ(2) ಮತ್ತು (3)ರಲ್ಲಿ ಓದಲಾಗಿರುವ ಆದೇಶಗಳಲ್ಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ರಚಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 208 ಸೇಎಸು 2019, ಬೆಂಗಳೂರು ದಿನಾಂಕ:04.12.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯ ಸಿವಿಲ್ ಸೇವಾ ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಹುದ್ದೆಗಳಿಗೆ ಮುಂಬಡ್ತಿಗಾಗಿ ಸೂಕ್ತತೆ ಹಾಗೂ ಅರ್ಹತೆಯನ್ನು ಪರಿಗಣಿಸುವ ಸಲುವಾಗಿ ಈ ಕೆಳಕಂಡಂತೆ ಇಲಾಖಾ ಮುಂಬಡ್ತಿ ಸಮಿತಿಯನ್ನು ರಚಿಸಿ ಆದೇಶಿಸಿದೆ:

**ಸಮಿತಿ-1**

**I. ಗ್ರೂಪ್-ಸಿ ವೃಂದದಿಂದ ಗ್ರೂಪ್-ಬಿ ವೃಂದಕ್ಕೆ ಮುಂಬಡ್ತಿ ನೀಡಲು:-**

| | | |
|---|---|---|
| **1.** | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ | **ಅಧ್ಯಕ್ಷರು** |
| **2.** | ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ | **ಸದಸ್ಯರು** |
| **3.** | ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು. | **ಸದಸ್ಯರು** |
| **4.** | ಸರ್ಕಾರದ ಅಪರ / ಜಂಟಿ / ಉಪ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ(ಸೇವೆಗಳು) | **ಸದಸ್ಯ ಕಾರ್ಯದರ್ಶಿ, ಸದಸ್ಯರು** |

**ಸಮಿತಿ–2**

## II. ಗ್ರೂಪ್–ಬಿ ವೃಂದದಿಂದ ಗ್ರೂಪ್–ಎ ವೃಂದಕ್ಕೆ ಮುಂಬಡ್ತಿ ನೀಡಲು:–

| | | |
|---|---|---|
| **1.** | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ | **ಅಧ್ಯಕ್ಷರು** |
| **2.** | ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ | **ಸದಸ್ಯರು** |
| **3.** | ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ | **ಸದಸ್ಯರು** |
| **4.** | ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು. | **ಸದಸ್ಯರು** |
| **5.** | ಸಂಸದೀಯ ವ್ಯವಹಾರಗಳ ಇಲಾಖೆಯ ಪ್ರತಿನಿಧಿ – ಉಪ ಕಾರ್ಯದರ್ಶಿ ಹುದ್ದೆಗಿಂತ ಕಡಿಮೆ ಇಲ್ಲದ ಅಧಿಕಾರಿ | **ಸದಸ್ಯರು** |
| **6.** | ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗೆ ಸೇರಿದ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡಕ್ಕೆ ಸೇರಿದ ಉಪ ಕಾರ್ಯದರ್ಶಿ ಹುದ್ದೆಗಿಂತ ಕಡಿಮೆ ಇಲ್ಲದ ಅಧಿಕಾರಿ | **ಸದಸ್ಯರು** |
| **7.** | ಸರ್ಕಾರದ ಅಪರ / ಜಂಟಿ / ಉಪಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ(ಸೇವೆಗಳು) | **ಸದಸ್ಯ ಕಾರ್ಯದರ್ಶಿ, ಸದಸ್ಯರು** |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಕೆ.ಎಲ್. ಪ್ರಸಾದ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸೇವೆಗಳು–ಎ)

PR-27

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ: ಶ್ರೀಮತಿ ಸುಲೋಚನ.ಕೆ.ಆರ್, ಆರಕ್ಷಕ ಉಪ ನಿರೀಕ್ಷಕರು, ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯ, ಮೈಸೂರು ಇವರನ್ನು ನೋಂದಣಿ & ಮುದ್ರಾಂಕ ಇಲಾಖೆಯಲ್ಲಿ ವಿಲೀನಗೊಳಿಸುವ ಬಗ್ಗೆ.**

**ಓದಲಾಗಿದೆ: 1) ಸರ್ಕಾರದ ಪತ್ರ ಸಂಖ್ಯೆ: ಕಂಇ 23 ಮುನೊಸೇ(2) 2016 ದಿನಾಂಕ: 01–06–2016.**

**2) ಒಳಾಡಳಿತ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಒಇ 104 ಪೊಸಇ 2016 ದಿನಾಂಕ: 14–07–2017.**

**3) ಶ್ರೀಮತಿ ಸುಲೋಚನ.ಕೆ.ಆರ್, ಆರಕ್ಷಕ ಉಪ ನಿರೀಕ್ಷಕರು ಇವರ ಮನವಿ ದಿನಾಂಕ: 15–07–2017**

**4) ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಇವರ ಪತ್ರ ಸಂಖ್ಯೆ: ಸಿಬ್ಬಂದಿ–2–97/2017–18 ದಿನಾಂಕ: 22–09–2017.**

* * * * *

**ಪ್ರಸ್ತಾವನೆ:**

ಶ್ರೀಮತಿ ಸುಲೋಚನ.ಕೆ.ಆರ್, ಆರಕ್ಷಕ ಉಪ ನಿರೀಕ್ಷಕರು, ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯ, ಮೈಸೂರು ಇವರನ್ನು ನೋಂದಣಿ & ಮುದ್ರಾಂಕ ಇಲಾಖೆಯಲ್ಲಿ ವಿಲೀನಗೊಳಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಪತ್ರದಲ್ಲಿ, ಸದರಿಯವರ ಸೇವೆಯನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ವಿಲೀನಗೊಳಿಸುವ ಕುರಿತು ಅಭಿಪ್ರಾಯ ನೀಡುವಂತೆ ಒಳಾಡಳಿತ ಇಲಾಖೆಯನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಅನಧಿಕೃತ ಟಿಪ್ಪಣಿಯಲ್ಲಿ, ಶ್ರೀಮತಿ ಸುಲೋಚನ.ಕೆ.ಆರ್, ಆರಕ್ಷಕ ಉಪ ನಿರೀಕ್ಷಕರು, ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯ, ಮೈಸೂರು, ಇವರು ಸಕ್ರಮವಾಗಿ ನೇಮಕ ಹೊಂದಿ ಪ್ರಸ್ತುತ ಆರಕ್ಷಕ ಉಪ ನಿರೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರ ಸೇವೆಯನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿನ ಉಪ ನೋಂದಣಾಧಿಕಾರಿ ಹುದ್ದೆಗೆ ಶಾಶ್ವತವಾಗಿ ವಿಲೀನಗೊಳಿಸಲು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಒಳಾಡಳಿತ ಇಲಾಖೆಯು ಸಹಮತಿಯನ್ನು ನೀಡಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಶ್ರೀಮತಿ ಸುಲೋಚನಾ.ಕೆ.ಆರ್, ಆರಕ್ಷಕ ಉಪ ನಿರೀಕ್ಷಕರು, ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯ, ಮೈಸೂರು ಇವರು ತಮ್ಮ ಮನವಿಯಲ್ಲಿ ಪೋಲೀಸ್ ಉಪ ನಿರೀಕ್ಷಕರಾಗಿ, ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯ, ಮೈಸೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಉಪ ನೋಂದಣಾಧಿಕಾರಿಯಾಗಿ ಶಾಶ್ವತ ವರ್ಗಾವಣೆಯ ಮೂಲಕ ಹುದ್ದೆಯನ್ನು ವಿಲೀನಗೊಳಿಸಲು ಇಚ್ಚಿಸಿರುತ್ತೇನೆ. ಉಪ ನೋಂದಣಾಧಿಕಾರಿ ಹುದ್ದೆಗೆ ಶಾಶ್ವತ ವರ್ಗಾವಣೆ ಮಾಡಿ ವಿಲೀನಗೊಳಿಸಲು ಮಾತೃ ಇಲಾಖೆಯಾದ ಒಳಾಡಳಿತ ಇಲಾಖೆಯು ಸಹಮತಿ ನೀಡಿದ್ದು, ಉಪ ನೋಂದಣಾಧಿಕಾರಿ ಹುದ್ದೆಯಲ್ಲಿನ ವೇತನ ಶ್ರೇಣಿಯಲ್ಲಿ ವಿಲೀನಗೊಳ್ಳಲು ಹಾಗೂ ನಾನು ವೇತನ ಶ್ರೇಣಿ ಹಾಗೂ ವೇತನದ ವ್ಯತ್ಯಾಸದ ಬಗ್ಗೆ ಯಾವುದೇ ತಕರಾರುಗಳನ್ನು ಇಲಾಖೆಯಲ್ಲಿಯಾಗಲಿ ಅಥವಾ ಯಾವುದೇ

ನ್ಯಾಯಾಲಯದಲ್ಲಾಗಲೀ ಆಕ್ಷೇಪಣೆ ಮಾಡುವುದಿಲ್ಲವೆಂದು ತಿಳಿಸಿದ್ದು ಮತ್ತು ನೌಕರರು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಉಪ ನೋಂದಣಾಧಿಕಾರಿ ಹುದ್ದೆಗೆ ನಿಗಧಿಪಡಿಸಿರುವ ಇಲಾಖಾ ಪರೀಕ್ಷೆಯಾದ ರಿಜಿಸ್ಟ್ರೇಷನ್ ತೇರ್ಗಡೆ ಹೊಂದಿರುವುದರಿಂದ ಮತ್ತು ಈ ಸಂಬಂಧ ನನ್ನಿಂದ ಯಾವುದೇ ಅಭ್ಯಂತರ ಮತ್ತು ಆಕ್ಷೇಪಣೆ ಇರುವುದಿಲ್ಲ ಎಂಬುದಾಗಿ ಒಪ್ಪಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರ ಪತ್ರದಲ್ಲಿ, ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಶ್ರೀಮತಿ ಸುಲೋಚನ.ಕೆ.ಆರ್, ಆರಕ್ಷಕ ಉಪ ನಿರೀಕ್ಷಕರು, ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯ, ಮೈಸೂರು ಇವರನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳು 1977ರ ನಿಯಮ 16(ಎ)(iii)(1)ರನ್ವಯ ಕೆಳಹಂತದ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸಲು ಅವಕಾಶವಿರುವುದರಿಂದ ಹಾಗೂ ಸದರಿಯವರು ಒಪ್ಪಿಗೆ ಪತ್ರ ನೀಡಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳು 1977ರ ನಿಯಮ 16ರಂತೆ ಸದರಿಯವರನ್ನು ವಿಲೀನಗೊಳಿಸಲು ಸರ್ಕಾರಕ್ಕೆ ಅಧಿಕಾರವಿರುತ್ತದೆಂಬ ಅಭಿಪ್ರಾಯವನ್ನು ತಿಳಿಸಲಾಗಿದೆ.

ಶ್ರೀಮತಿ ಸುಲೋಚನ.ಕೆ.ಆರ್, ಆರಕ್ಷಕ ಉಪ ನಿರೀಕ್ಷಕರು, ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ, ಮೈಸೂರು ಇವರ ಸೇವೆಯನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ವಿಲೀನಗೊಳಿಸಲು ಒಳಾಡಳಿತ ಇಲಾಖೆಯು ಒಪ್ಪಿಗೆ ನೀಡಿರುವ ಹಿನ್ನೆಲೆಯಲ್ಲಿ, ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ನೀಡಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಹಾಗೂ ಸದರಿಯವರು ಇಲಾಖಾ ಪರೀಕ್ಷೆಯಾದ ನೋಂದಣಿ ಕಾಯ್ದೆಯ ವಿಷಯದಲ್ಲಿ ಉತ್ತೀರ್ಣರಾಗಿರುವ ಹಿನ್ನೆಲೆಯಲ್ಲಿ ಪರಿಶೀಲಿಸಿ, ಶ್ರೀಮತಿ ಸುಲೋಚನಾ.ಕೆ.ಆರ್, ಆರಕ್ಷಕ ಉಪ ನಿರೀಕ್ಷಕರು, ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯ, ಮೈಸೂರು ಇವರನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳು, 1977ರ ನಿಯಮ 16(ಎ)(ii) ರನ್ವಯ ಷರತ್ತುಗಳೊಂದಿಗೆ ವರ್ಗಾವಣೆ ಮೂಲಕ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಉಪ ನೋಂದಣಾಧಿಕಾರಿ ಹುದ್ದೆಗೆ ವಿಲೀನಗೊಳಿಸುವ ಬಗ್ಗೆ ಇದನ್ನು ಪೂರ್ವ ನಿರ್ದೇಶನವಾಗಿ ಪರಿಗಣಿಸತಕ್ಕದ್ದಲ್ಲವೆಂಬದನ್ನು ಸರ್ಕಾರವು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಕಂಇ 28 ಮುನೋಸೇ(2) 2017;</u>**
**<u>ಬೆಂಗಳೂರು, ದಿನಾಂಕ: 19-09-2018.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಸುಲೋಚನ.ಕೆ.ಆರ್, ಆರಕ್ಷಕ ಉಪ ನಿರೀಕ್ಷಕರು, ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯ, ಮೈಸೂರು ಇವರನ್ನು ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳು 1977ರ ನಿಯಮ 16(ಎ)(ii)ರನ್ವಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಉಪ ನೋಂದಣಾಧಿಕಾರಿ ಹುದ್ದೆಗೆ ಕೆಳಕಂಡ ಷರತ್ತುಗಳೊಂದಿಗೆ ಶಾಶ್ವತ ವರ್ಗಾವಣೆ ಮೂಲಕ ವಿಲೀನಗೊಳಿಸಲು ಹಾಗೂ ಇದನ್ನು ಪೂರ್ವ ನಿರ್ದೇಶನವಾಗಿ ಪರಿಗಣಿಸತಕ್ಕದಲ್ಲವೆಂದು ತಿಳಿಸಿ ಆದೇಶಿಸಿದೆ.

1) ಕರ್ನಾಟಕ ನಾಗರೀಕ ಸೇವೆ (ಸೇವೆಗಳು ಮತ್ತು ಕನ್ನಡ ಭಾಷೆ ಪರೀಕ್ಷೆ) ನಿಯಮ 1974 ರಂತೆ ಒಂದು ವರ್ಷದ ಅವಧಿಯಲ್ಲಿ ಹುದ್ದೆಗೆ ನಿಗಧಿಪಡಿಸುವ ಎಲ್ಲಾ ಪರೀಕ್ಷೆಗಳನ್ನು ಪಾಸು ಮಾಡುವುದು.
2) ಕರ್ನಾಟಕ ನಾಗರೀಕ ಸೇವಾ (ಜೇಷ್ಠತೆ) ನಿಯಮಗಳು 1957 ರ ನಿಯಮ 6-ಎ ರಂತೆ ಇವರ ಜೇಷ್ಠತೆಯನ್ನು ಉಪ ನೋಂದಣಾಧಿಕಾರಿ ಹುದ್ದೆಗೆ ವಿಲೀನಗೊಳಿಸಿದ ದಿನಾಂಕದಿಂದ ಜೇಷ್ಠತಾ ಪಟ್ಟಿಯಲ್ಲಿ ಕೊನೆಯ ಸ್ಥಾನ ನಿಗಧಿಪಡಿಸುವುದು.
3) ವರ್ಗಾವಣೆ ಭತ್ಯೆ ಪಡೆಯಲು ಅರ್ಹರಿರುವುದಿಲ್ಲ.
4) ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರನ್ವಯ ವರ್ಗಾವಣೆ ಮೂಲಕ ನೇಮಕಾತಿಯನ್ನು ನೌಕರರ ಸೇವಾವಧಿಯಲ್ಲಿ ಒಮ್ಮೆ ಮಾತ್ರ ಪರಿಗಣಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಮುರಳೀಧರ ಎಸ್.ತಳ್ಳಿಕೇರಿ)**
ಪೀಠಾಧಿಕಾರಿ,
ಕಂದಾಯ ಇಲಾಖೆ,
(ನೋಂದಣಿ ಮತ್ತು ಮುದ್ರಾಂಕ)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**ಸರ್ಕಾರಿ ನೌಕರರು ಸರ್ಕಾರದಿಂದ ಮಾನ್ಯತೆ ಹೊಂದಿಲ್ಲದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ವೈದ್ಯಕೀಯಚಿಕಿತ್ಸೆಯ ಮರುಪಾವತಿಯಅರ್ಹತಾದಾಯಕ ಮೊತ್ತದ ಮಾಹಿತಿಯನ್ನುಸುವರ್ಣಆರೋಗ್ಯ ಸುರಕ್ಷಾಟ್ರಸ್ಟ್‌ನಿಂದ ಪಡೆಯುವ ಬಗ್ಗೆ.

**ಪ್ರಸ್ತಾವನೆ:**

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 ರನ್ವಯ ಸರ್ಕಾರಿ ನೌಕರರುಹಾಗೂ ಅವರಕುಟುಂಬದಅವಲಂಬಿತಸದಸ್ಯರುಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ವೈದ್ಯಕೀಯಚಿಕಿತ್ಸೆಯ ಮರುಪಾವತಿ ವೆಚ್ಚವನ್ನು ಸಕ್ಷಮ ಮಂಜೂರಾತಿ ಪ್ರಾಧಿಕಾರಿಗಳು ಸಿಜಿಹೆಚ್ಎಸ್ ದರಪಟ್ಟಿಯನುಸಾರ ಮಂಜೂರು ಮಾಡಲುಅಧಿಕಾರ ಹೊಂದಿರುತ್ತಾರೆ.

ಆದರೆ, ಸರ್ಕಾರಿಆದೇಶ ಸಂಖ್ಯೆ:ಸಿಆಸುಇ 31 ಎಸ್ಎಂಆರ್ 2014 ದಿನಾಂಕ:05.11.2014ರಲ್ಲಿ ಕೆಲವು ತುರ್ತು ಸಂದರ್ಭಗಳಲ್ಲಿ ಸರ್ಕಾರಿ ನೌಕರರು ಸರ್ಕಾರದಿಂದ ಮಾನ್ಯತೆ ಹೊಂದಿರದಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ವೈದ್ಯಕೀಯಚಿಕಿತ್ಸೆಯ ಮರುಪಾವತಿಪ್ರಕರಣಗಳನ್ನು ಅಪವಾದಾತ್ಮಕ/ವಿಶೇಷ ಪ್ರಕರಣಗಳೆಂದು ಪರಿಗಣಿಸಿ,ಸಿ.ಜಿ.ಹೆಚ್.ಎಸ್ ದರಗಳನ್ನು ಅಥವಾ ನಿರ್ದೇಶಕರು, ಆರೋಗ್ಯ ಮತ್ತುಕುಟುಂಬ ಕಲ್ಯಾಣ ಸೇವೆಗಳು ಇವರು ನಿಗದಿಪಡಿಸುವಅರ್ಹತಾ ಮೊತ್ತವನ್ನುನಿಯಮ ಸಡಿಲಿಸಿ ಮಂಜೂರು ಮಾಡಲು ಇಲಾಖಾ ಕಾರ್ಯದರ್ಶಿಗಳಿಗೆ ಮಾತ್ರಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ.

ಸರ್ಕಾರಿ ನೌಕರರುಸರ್ಕಾರದಿಂದ ಮಾನ್ಯತೆ ಹೊಂದಿರದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ವೈದ್ಯಕೀಯ ವೆಚ್ಚದ ಕ್ಲೇಮುಗಳ ಅರ್ಹತಾದಾಯಕ ಮೊತ್ತದಬಗ್ಗೆ ಹಲವಾರು ಇಲಾಖೆಗಳು ನಿರ್ದೇಶಕರುಆರೋಗ್ಯ ಮತ್ತುಕುಟುಂಬ ಕಲ್ಯಾಣ ಸೇವೆಗಳು ಇವರಿಗೆಪ್ರಸ್ತಾವನೆಗಳನ್ನು ಸಲ್ಲಿಸುತ್ತಿದ್ದು, ಅವರಿಂದಇಂತಹ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅರ್ಹತಾದಾಯಕ ಮೊತ್ತವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಸಕಾಲದಲ್ಲಿತಿಳಿಸಲು ಸಾಧ್ಯವಾಗದೇ, ವೈದ್ಯಕೀಯ ವೆಚ್ಚಗಳನ್ನು ಮರುಪಾವತಿಸುವಲ್ಲಿಅನಗತ್ಯ ವಿಳಂಬ ಉಂಟಾಗುತ್ತಿರುವುದನ್ನು ಸರ್ಕಾರವು ಗಮನಿಸಿದೆ.

ಈ ಹಿನ್ನೆಲೆಯಲ್ಲಿ, ಸರ್ಕಾರಿ ನೌಕರರಇಂತಹ ವೈದ್ಯಕೀಯ ವೆಚ್ಚದ ಕ್ಲೇಮುಗಳನ್ನು ನಿರ್ದೇಶಕರು, ಆರೋಗ್ಯ ಮತ್ತುಕುಟುಂಬ ಕಲ್ಯಾಣ ಸೇವೆಗಳು ಇವರ ಬದಲಾಗಿ ಸುವರ್ಣಆರೋಗ್ಯ ಸುರಕ್ಷಾಟ್ರಸ್ಟ್‌ಗೆಸಲ್ಲಿಸಿ ಸದರಿ ಸಂಸ್ಥೆಯಿಂದಮರುಪಾವತಿಸಬಹುದಾದಅರ್ಹತಾದಾಯಕ ಮೊತ್ತದ ಮಾಹಿತಿಯನ್ನು ಪಡೆಯುವಂತೆಎಲ್ಲಾ ಇಲಾಖೆಗಳಿಗೆ ಸೂಚಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 48 ಎಸ್‌ಎಂಆರ್ 2018(ಭಾ), ಬೆಂಗಳೂರು,ದಿನಾಂಕ:13.09.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ,ಸರ್ಕಾರಿ ನೌಕರರು ಹಾಗೂ ಅವರಕುಟುಂಬದಅವಲಂಬಿತಸದಸ್ಯರುಸರ್ಕಾರದಿಂದ ಮಾನ್ಯತೆ ಹೊಂದಿರದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ವೈದ್ಯಕೀಯಚಿಕಿತ್ಸೆಯ ಮರುಪಾವತಿಯಅರ್ಹತಾದಾಯಕಮೊತ್ತದ ಬಗ್ಗೆ ಪ್ರಸ್ತಾವನೆಗಳನ್ನು ಕಾರ್ಯಕಾರಿ ನಿರ್ದೇಶಕರು, ಸುವರ್ಣಆರೋಗ್ಯ ಸುರಕ್ಷಾಟ್ರಸ್ಟ್, ಬಿ.ಎಂ.ಟಿ.ಸಿ., ಟಿ.ಟಿ.ಎಂ.ಸಿ. 'ಎ ಬ್ಲಾಕ್', 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027ಇವರಿಗೆ ಸಲ್ಲಿಸುವಂತೆಎಲ್ಲಾ ಇಲಾಖೆಗಳಿಗೆ ಸೂಚಿಸಲಾಗಿದೆ. ಸುವರ್ಣಆರೋಗ್ಯ ಸುರಕ್ಷಾಟ್ರಸ್ಟ್ಇಂತಹ ಪ್ರತಿಯೊಂದು ಕ್ಲೇಮುಗಳನ್ನು ಸಿ.ಜಿ.ಹೆಚ್.ಎಸ್.ದರಪಟ್ಟಿಯಂತೆ ಪರಿಶೀಲಿಸಿ ಮರುಪಾವತಿಸಬಹುದಾದಅರ್ಹತಾದಾಯಕ ಮೊತ್ತದ ಮಾಹಿತಿಯನ್ನುಸಕಾಲದಲ್ಲಿಸಂಬಂಧಪಟ್ಟ ಇಲಾಖೆಗಳಿಗೆ ತಿಳಿಸುವಂತೆ ಆದೇಶಿಸಿದೆ.

ಕರ್ನಾಟಕರಾಜ್ಯಪಾಲರಆದೇಶದ ಮೇರೆಗೆ
ಮತ್ತುಅವರ ಹೆಸರಿನಲ್ಲಿ,

**(ಚಂದ್ರಹಾಸ ಗಂ.ತಾಳೂಕರ)**
ಸರ್ಕಾರದಉಪ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು–2)

PR-29

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–೫೬.

SUNIL GARDE Digitally signed by SUNIL GARDE Date: 2020.01.30 15:08:55 +05'30'